بِسْمِ اللّٰهِ الرَّحْمٰنِ الرَّحِيْمِ    نَحْمَدُهٗ وَنُصَلِّی عَلٰی رَسُوْلِهِ الْكَرِيْمِ    وَعَلٰی عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 05

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 23

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

06 ಜೂನ್ 2024, 06 ಇಹ್‌ಸಾನ್ 1403 ಹಿಜರಿ ಶಮ್‌ಸಿ,
28 ಝುಲ್-ಖಅ್‌ದ 1445 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

اِنَّ اللّٰهَ لَهٗ مُلْكُ السَّمٰوٰتِ
وَالْاَرْضِ ؕ يُحْيٖ وَيُمِيْتُ ؕ
وَمَا لَكُمْ مِّنْ دُوْنِ اللّٰهِ
مِنْ وَّلِيٍّ وَّلَا نَصِيْرٍ ﴿۱۱۶﴾

(سورۃ توبہ آیت 116)

(ಅತ್ತೌಬ: 116)

ಅಂದರೆ: ಖಂಡಿತವಾಗಿಯೂ ಆಕಾಶಗಳ ಮತ್ತು ಭೂಮಿಯ ಆಧಿಪತ್ಯ ಅಲ್ಲಾಹನಿಗಿದೆ. ಅವನು ಜೀವಂತಗೊಳಿಸುತ್ತಾನೆ ಹಾಗೂ ಮೃತಪಡಿಸುತ್ತಾನೆ. ಅಲ್ಲಾಹನ ಹೊರತು ನಿಮಗೆ ಮಿತ್ರನಾಗಲಿ, ಸಹಾಯಕನಾಗಲಿ ಇಲ್ಲ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

**ನಿಮ್ಮ ಪೈಕಿ ಆಡಳಿತ ಹೊಂದಿರುವ ಪ್ರತಿಯೊಬ್ಬ ಆಡಳಿತಗಾರನು ತನ್ನ ಪ್ರಜೆಯ ಬಗ್ಗೆ ಪ್ರಶ್ನಿಸಲಾಗುವನು.**

**(2409)** ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ವರದಿ ಮಾಡುತ್ತಾರೆ, ರಸೂಲುಲ್ಲಾಹ್(ಸ) ನುಡಿಯುತ್ತಾರೆ: ನಿಮ್ಮ ಪೈಕಿ ಆಡಳಿತ ಹೊಂದಿರುವ ಪ್ರತಿಯೊಬ್ಬ ಆಡಳಿತಗಾರನಲ್ಲಿ ತನ್ನ ಪ್ರಜೆಗಳ ಬಗ್ಗೆ ಪ್ರಶ್ನಿಸಲಾಗುವುದು. ರಾಜನಾದವನು ಆಡಳಿತ ಹೊಂದಿರುತ್ತಾನೆ. ಆದುದರಿಂದ ಅವನು ಪ್ರಜೆಗಳ ಬಗ್ಗೆ ಪ್ರಶ್ನಿಸಲ್ಪಡುವನು. ಅಂತೆಯೇ ಪ್ರತಿಯೊಬ್ಬ ಮನುಷ್ಯನು ತನ್ನ ಮನೆಯ ಯಜಮಾನ ಆಡಳಿತಗಾರನಾಗಿರುತ್ತಾನೆ. ಆದುದರಿಂದ ಅವನಿಂದಲೂ ಅವನ ಪ್ರಜೆ (ಕುಟುಂಬ)ದ ಬಗ್ಗೆ ಪ್ರಶ್ನಿಸಲ್ಪಡುವನು. ಮಹಿಳೆಯೂ ಸಹ ತನ್ನ ಪತಿಯ ಮನೆಯಲ್ಲಿ ಆಡಳಿತ ಹೊಂದಿರುತ್ತಾಳೆ. ಆದುದರಿಂದ ಅವಳಿಂದಲೂ ಅವಳ ಪ್ರಜೆ (ಕುಟುಬ)ದ ಬಗ್ಗೆ ಪ್ರಶ್ನಿಸಲ್ಪಡುವಳು. ಮನೆಯ ಸೇವಕನು (ನೌಕರನು) ಸಹ ಸಂಪತ್ತಿನ ರಕ್ಷಣೆಗೊಸ್ಕರ ಜವಾಬ್ದಾರನಾಗಿರುತ್ತಾನೆ. ಅವನೂ ಸಹ ಈ ಪೈಕಿ ಪ್ರಶ್ನಿಸಲ್ಪಡುವನು. (ಹಝ್ರತ್ ಇಬ್ನು ಉಮರ್(ರ) ಹೇಳಿದರು. ನಾನು ರಸೂಲುಲ್ಲಾಹ್(ಸ) ಅವರಿಂದ ಇವೆಲ್ಲ ಜನರ ಪೈಕಿ ಆಲಿಸಿರುತ್ತೇನೆ. ಮತ್ತು ನನ್ನ ಭಾವನೆಯಾಗಿದೆ. ನಬಿ(ಸ) ಹೀಗೂ ನುಡಿದಿದ್ದರು. ಮನುಷ್ಯನು ತನ್ನ ತಂದೆಯ ಸಂಪತ್ತಿಗೂ ಜವಾಬ್ದಾರನಾಗಿದ್ದಾನೆ. ಅವನೂ ಸಹ ಎಂದರೆ ಆ ಸಂಪತ್ತಿನ ಪೈಕಿ ಪ್ರಶ್ನಿಸಲ್ಪಡುವನು. ಆದುದರಿಂದ ನಿಮ್ಮ ಪೈಕಿ ಪ್ರತಿಯೊಬ್ಬನು ಜವಾಬ್ದಾರನಾಗಿದ್ದಾನೆ. ಅವನು ತಮ್ಮ ಪ್ರಜೆ (ಸಂಪತ್ತಿನ ರಕ್ಷಣ) ಗಳ ಕುರಿತು ಪ್ರಶ್ನಿಸಲ್ಪಡುವನು.

**(ಸಹೀಹ್ ಬುಖಾರಿ, ಸಂಪುಟ-4, ಕಿತಾಬುಲ್ ಇಸ್ತಿಗ್‌ರಾಝ್, 2008 ಖಾದಿಯಾನ್)**


**MUSLIM TELEVISION AHMADIYYA INTERNATIONAL**
**www.mta.tv**


ನಮ್ಮ ಪ್ರವಾದಿ ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬಿಗಳು ಮಕ್ಕಾದಲ್ಲಿ ತೋರಿಸಿದ ತಾಳ್ಮೆಯ ಮಾದರಿಯನ್ನು ನಮ್ಮ ಸ್ನೇಹಿತರು ಪ್ರಸ್ತುತ ಕಾಲದಲ್ಲಿ ತೋರಿಸಬೇಕು.

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ಶೇಖ್ ರಹ್ಮತುಲ್ಲಾಹ್ ಸಾಹಿಬ್ ಅವರ ಪತ್ರವು ಒಂದು ಸಂಕಟಕ್ಕೆ ಸಂಬಂಧಿಸಿದಂತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸೇವೆಗೆ ತಲುಪಿತು, ಅದರ ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು:

"ಅವರಿಗೆ ಲಭಿಸಿದ ಈ ಸಂಕಟಕ್ಕಾಗಿ ನಾನು ಅವರಿಗಾಗಿ ತುಂಬಾ ಪ್ರಾರ್ಥಿಸುತ್ತೇನೆ. ಇದರಿಂದ ನನಗೆ ತುಂಬಾ ಸಂತೋಷವಾಯಿತು. ವಾಸ್ತವವೇನೆಂದರೆ, ಸಂಕಟಗಳು ಮಹಾನ್ ಕರುಣೆಗೆ ಕಾರಣವಾಗುತ್ತದೆ, ಒಂದು ಕಡೆ, ಆರಾಧಕನು (ಮುಝ್ತರ್) ದುಃಖಕ್ಕೆ ಒಳಗಾಗುತ್ತಾನೆ ಮತ್ತು ಎಲ್ಲಾ ಕಡೆಯಿಂದ ಕತ್ತರಿಸಲ್ಪಟ್ಟು ಏಕೈಕ ಕಾರಣಕರ್ತನ ಕಡೆಗೆ ವಾಲುತ್ತಾನೆ ಮತ್ತು ಇನ್ನೊಂದೆಡೆಯಿಂದ ದೈವಿಕತೆಯು ತನ್ನ ಕೃಪೆಯ ಸೈನ್ಯದೊಂದಿಗೆ ಅವನನ್ನು ಸಾಂತ್ವನಗೊಳಿಸಲು ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಪ್ರವಾದಿಗಳ ವಾಡಿಕೆ (ಸುನ್ನತ್) ಮತ್ತು ಅಲ್ಲಾಹನ (ವಾಡಿಕೆ) ಸುನ್ನತ್‌ನಲ್ಲಿ ನಾನು ಯಾವಾಗಲೂ ನೋಡುವುದೇನೆಂದರೆ, ಈ ಪ್ರೀತಿಯ ಸಮುದಾಯದ ಸಹಾನುಭೂತಿ ಮತ್ತು ಕರುಣೆಯು ದುಃಖದ ಸಮಯದಲ್ಲಿ ತನ್ನ ದಾಸರ ಕಡೆಗೆ ಎಷ್ಟು ಉತ್ಸಾಹದಿಂದ ಕೂಡಿರುತ್ತದೆ ಎಂದರೆ, ಅದು ವಿಶ್ರಾಂತಿ ಹಾಗೂ ಸಂರಕ್ಷಣೆಯ ಸಂದರ್ಭದಲ್ಲಿ ಆ ಪರಿಸ್ಥಿತಿಯಲ್ಲಿ ಇರುವುದಿಲ್ಲ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಝುಹರ್ ನಮಾಝ್ ಮೊದಲು ಬಹಳ ಸೂಕ್ಷ್ಮವಾದ ಭಾಷಣ ನೀಡಿದರು ಮತ್ತು ಮೌಲಾನಾ ಅಬ್ದುಲ್ ಕರೀಂ ಸಾಹಿಬ್ ಅವರನ್ನು ಉದ್ದೇಶಿಸಿ ಹೇಳಿದರು:

"ಏನೆಲ್ಲೆ ಸಂಭವಿಸುತ್ತಿದೆಯೊ ಅದು ಅಲ್ಲಾಹನ ಚಿತ್ತದಂತೆ ನಡೆಯುತ್ತಿದೆ. ವಾಗ್ದಾತ್ತ ಮಹದಿಯ ಸಮಯದಲ್ಲಿ ದೊಡ್ಡ ಗಲಾಟೆ ನಡೆಯುವುದು ಮತ್ತು ಅದನ್ನು ಪೂರ್ವಜರ ನಂಬಿಕೆಗಳ ವಿರುದ್ಧ ಮಾತನಾಡುವವನು ಎಂದು ಆತನನ್ನು 'ಕಾಫಿರ್' (ಅವಿಶ್ವಾಸಿ) ಎಂದು ಹೇಳುವರು ಎಂದು ಬರೆದಿರುವ ಲಕ್ಷಣಗಳ ಸತ್ಯಾಸತ್ಯತೆಯನ್ನು ಈ ಜನರು ತಮ್ಮ ಕೈಗಳಿಂದ ಮುಚ್ಚುವುದು ಅಗತ್ಯವಾಗಿತ್ತು. ಆದ್ದರಿಂದ ಪ್ರಸ್ತುತ ಕಾಲದಲ್ಲಿ, ನಮ್ಮ ಸ್ನೇಹಿತರು ನಮ್ಮ ಪ್ರವಾದಿ ಹಝ್ರತ್ ಪೈಗಂಬರ್(ಸ.ಅ) ಮತ್ತು ಮಕ್ಕಾದಲ್ಲಿದ್ದ ಅವರ ಸಹಾಬಗಳಂತೆ ತಾಳ್ಮೆಯಿಂದಿರಬೇಕು. ಅಲ್ಲಿನ ಅಧಿಕಾರಿಗಳಿಗೆ ತಲುಪುವಂತಹ ಯಾವುದೇ ಕೃತ್ಯ ಅವರು ಕೈಗೊಳ್ಳುತ್ತಿರಲಿಲ್ಲ. ಅಂತಹವರು ನಮಗೆ ಸಹಾಯ ಮಾಡುತ್ತಾರೆ ಎಂದು ಈ ಸಮಯದಲ್ಲಿ ಯಾರನ್ನೂ ನಂಬಬೇಡಿ. ನೆನಪಿಡಿ, ಈ ಸಮಯದಲ್ಲಿ, ಸರ್ವಶಕ್ತನಾದ ಅಲ್ಲಹನನ್ನು ಹೊರತುಪಡಿಸಿ ಯಾವುದೇ ರಕ್ಷಕ ಮತ್ತು ಬೆಂಬಲಿಗನಿಲ್ಲ.

**(ಮಲ್‌ಫೂಝಾತ್, ಸಂಪುಟ-2, ಪುಟಗಳು 4-5, ಪ್ರಕಟಿತ 2018, ಖಾದಿಯಾನ್)**

ಅಬುಲಹಬ್ ಪತ್ನಿಯ ಕಥೆಯು ಕೇವಲ ಕಟ್ಟುಕಥೆಯಾಗಿದೆ, ಇಡೀ ಲೋಕಕ್ಕೆ ಹೆದರದ ಅಲ್ಲಾಹನ ಆ ಪ್ರವಾದಿಯು(ಸ) ಓರ್ವ ದುರ್ಬಲ ಹೆಣ್ಣಿಗೆ ಹೆದರಲು ಹೇಗೆ ಸಾಧ್ಯ, ಅಲ್ಲಾಹನು ಅವಳನ್ನು ಮಾಯವಾಗಿಸುವ ದುಸ್ಥಿತಿ ಒದಗಿ ಬಂತು.

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಬನೀ ಈಸ್ರಾಯೀಲ್ ವಚನ 46 **ವಇಝಾ ಖರಅ್‌ತಲ್ ಖುರ್‌ಆನ ಜಅಲ್‌ನ ಬೈನಕ ವ ಬೈನಲ್ಲಝೀನ ಲಾ ಯುಮಿನೂನ ಬಿಲ್‌ಆಖಿರತಿ ಹಿಜಾಬಮ್ಮಸ್‌ತೂರ.** ದ ವ್ಯಾಖ್ಯಾನದಲ್ಲಿ ಹೇಳುತ್ತಾರೆ.

ಈ ವಚನಕ್ಕೆ ಎರಡು ಅರ್ಥಗಳಿವೆ. 1) ನೀನು ಪವಿತ್ರ ಖುರ್‌ಆನ್ ಪಠಿಸುವಾಗ ನಾವು ನಿನ್ನ ನಡುವೆ ಮತ್ತು ಅಂತಿಮ ತೀರ್ಮಾನ ದಿನದ ಮೇಲೆ ವಿಶ್ವಾಸ ಹೊಂದಿದ ಜನರ ನಡುವೆ ಎಂತಹ ಪರದೆಯನ್ನು ಉಂಟು ಮಾಡುತ್ತೇವೆ ಎಂದರೆ ಅದನ್ನು ಸ್ವಯಂ ಅವರೇ ತಿಳಿಯಲಾರರು. ಎಂದರೆ ಆ ಪರದೆಯು ಸಹ ಅವರ ದೃಷ್ಟಿಗೆ ಗೋಚರಿಸದು. ಇದನ್ನು ಹೇಳುವ ಉದ್ದೇಶ ಯಾವೊಬ್ಬ ಮೂಡನು ಈ ಬಾಹ್ಯ ಪರದೆ ಎಂದು ಭಾವಿಸಬಾರದು.

*(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಹಝ್ರ‌ತ್ ಪೈಗಂಬರ್(ಸ) ತನ್ನ ಯುಕ್ತಿ ಮತ್ತು ಯೋಜನೆಯ ಮೂಲಕ ಮಾತ್ರ ಅನೇಕ ಮಹತ್ತಾದ ಪ್ರಯೋಜನಗಳನ್ನು ಗಳಿಸಿದರು. ಹಝ್ರ‌ತ್ ಪೈಗಂಬರ್(ಸ) ಮಾಡಿದ ಎಲ್ಲ ಯುದ್ಧಗಳ ಮೇಲೆ ದೃಷ್ಟಿ ಹಾಯಿಸುವಾಗ ಹಝ್ರ‌ತ್ ಪೈಗಂಬರ್(ಸ)ರ ಅತ್ಯುತ್ತಮ, ಅತುಲ್ಯ ಸಾಮರ್ಥ್ಯಗಳ ಬಗ್ಗೆ ಆಶ್ಚರ್ಯಕರವಾದ ಬೆಳಕು ಬೀಳುತ್ತದೆ. ಆದರೆ ಹಝ್ರ‌ತ್ ಪೈಗಂಬರ್(ಸ)ರ ಮೊದಲಿನ ಮತ್ತು ಕೊನೆಯ ಪದವಿ ಒಬ್ಬ ಯುದ್ಧ ಪರಿಣಿತ ಎಂಬ ರೀತಿಯಲ್ಲಿ ಅಲ್ಲ. ಬದಲಾಗಿ ಒಬ್ಬ ನೈತಿಕ ಮತ್ತು ಆಧ್ಯಾತ್ಮಿಕ ನೇತಾರ ಎಂಬ ಮಟ್ಟದಲ್ಲಿ ಆಗಿತ್ತು. ಅವರ ಕೈಯಲ್ಲಿ ಉನ್ನತ ನೈತಿಕ ಸ್ವಭಾವ ಗುಣಗಳ ಧ್ವಜ ನೀಡಲ್ಪಟ್ಟಿತ್ತು.

ಹಝ್ರ‌ತ್ ಪೈಗಂಬರ್(ಸ) ಕೆಲವು ಜನರನ್ನು ಉಹುದಿನ ಒಂದು ಗುಡ್ಡೆಯಲ್ಲಿ ನಿಲ್ಲಿಸಿದರು ಮತ್ತು ಆ ಜಾಗವನ್ನು ಬಿಡಬಾರದು ಎಂದು ಬಹಳವಾಗಿ ತಾಕೀತು ಮಾಡಿದ್ದರು. ಆದರೆ ಯುದ್ಧ ಸಂಪತ್ತಿನ ಚಿಂತೆಯಿಂದ ಆ ಜಾಗವನ್ನು ಅವರು ಖಾಲಿಯಾಗಿ ಬಿಟ್ಟರು ಮತ್ತು ಈ ದೌರ್ಬಲ್ಯವು ಒಂದು ಸೀಮಿತವಾದ ಗುಂಪಿನಿಂದ ಸಂಭವಿಸಿತು ಆದರೆ ಮಾನವ ನಾಗರಿಕತೆಯು ಎಲ್ಲರನ್ನೂ ಒಂದೇ ದಾರದಲ್ಲಿ ಪೋಣಿಸಿರುತ್ತದೆ ಆದ್ದರಂದ ಈ ದೌರ್ಬಲ್ಯದಿಂದ ಎಲ್ಲರೂ ನಷ್ಟವನ್ನು ಅನುಭವಿಸಿದರು

ಒಟ್ಟಿನಲ್ಲಿ ಉಹುದಿನ ಸೋಲು ಒಂದು ರೀತಿಯಲ್ಲಿ ನೋವಿಗೆ ಕಾರಣವಾಗಿದ್ದರೂ ಮತ್ತೊಂದು ರೀತಿಯಲ್ಲಿ ಮುಸ್ಲಿಮರಿಗೆ ಅದು ಒಂದು ಉಪಯುಕ್ತವಾದ ಪಾಠವಾಯಿತು.

ಉಹುದ್ ಯುದ್ಧದಲ್ಲಿ ಚಂಚಲಗೊಂಡಿದ್ದ ಸಹಾಬಿಯರನ್ನು ಹಝ್ರ‌ತ್ ಪೈಗಂಬರ್(ಸ) ಸಾಂತ್ವನಪಡಿಸಿದರು ಮತ್ತು ಅವರ ಮೇಲೆ ಪೂರ್ಣವಾದ ವಿಶ್ವಾಸವನ್ನು ಇರಿಸಿಕೊಂಡರು.

ಹಝ್ರ‌ತ್ ಪೈಗಂಬರ್(ಸ)ರಿಗೆ ಉಹುದಿನ ಸಹಾಬಿಯರ ಮೇಲೆ ಇದ್ದ ಪರಿಪೂರ್ಣ ವಿಶ್ವಾಸವು ಕೇವಲ ಭಾವುಕರಾಗಿ ಮಾಡಿದ ತೀರ್ಮಾನವಾಗಿರಲಿಲ್ಲ. ಬದಲಾಗಿ ಉಹುದ್ ಯುದ್ಧದ ಮರುದಿನವೇ ಶತ್ರುಗಳನ್ನು ಹಿಂಬಾಲಿಸಲು ಮಾಡಿದ ಹಝ್ರ‌ತ್ ಪೈಗಂಬರ್(ಸ)ರ ತೀರ್ಮಾನ ತನ್ನ ಸಂಗಡಿಗರ ಮೇಲೆ ಮಾಡಿದ ಒಂದು ಮಹತ್ತಾದ ಉಪಕಾರವಾಗಿದೆ.

**ಹಮ್ರಾಉಲ್ ಅಸದ್ ಯುದ್ಧದ ಉಲ್ಲೇಖದೊಂದಿಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಪರಿಶುದ್ಧ ಜೀವನಚರಿತ್ರೆ ಹಾಗೂ ಸಹಾಬಿಯರ ತ್ಯಾಗಗಳ ವಿಶ್ವಾಸವರ್ಧಕ ಪ್ರಸ್ತಾಪ**

ಉಹುದ್ ಯುದ್ಧದ ಫಲಿತಾಂಶದ ಕುರಿತು ಚರಿತ್ರೆಗಾರರು ಬಹಳ ದೀರ್ಘವಾಗಿ ಚರ್ಚಿಸಿರುವರು. ಕೆಲವು ಚರಿತ್ರೆಗಾರರು ಅದನ್ನು ಪರಾಜಯವಾಗಿ ಗಣಿಸುತ್ತಾರೆ. ಕೆಲವರು ಅದನ್ನು ಪರಾಜಯವಾಗಿ ಹೇಳಲು ಹಿಂಜರಿಯುತ್ತಾರೆ. ಅವರು ಎರಡೂ ಅಲ್ಲದ ಒಂದು ಅಭಿಪ್ರಾಯವನ್ನು ಇರಿಸಲು ಬಯಸುತ್ತಾರೆ. ಅದನ್ನು ಪರಾಜಯದ ನಂತರದ ವಿಜಯವಾಗಿ ಗಣಿಸುವ ಕೆಲವರೂ ಇದ್ದಾರೆ. ನಿಜವೇನೆಂದರೆ, ಆ ಕಾಲದ ಯುದ್ಧ ನಿಯಮಗಳು ಮತ್ತು ಸಂಪ್ರದಾಯದ ಪ್ರಕಾರ ಅದನ್ನು ಪರಾಜಯವೆಂದು ಕರೆಯಲು ಸಾಧ್ಯವಲ್ಲ.

ಲೋಕದ ಸ್ಥಿತಿಗತಿಗಳಿಗೆ ಹಾಗೂ ಹಝ್ರತ್ ಅಮೀರುಲ್ ಮುಮಿನೀನ್(ಅತಬಿಅ) ಅವರ ಯೋಗಕ್ಷೇಮಕ್ಕಾಗಿ ದುಆ ಮಾಡುವುದಾಗಿ ಮನವಿ

ಲೋಕದ ಸ್ಥಿತಿಗಳು, ಮುಸ್ಲಿಮರ ಅವಸ್ಥೆ ಮತ್ತು ಪೆಲಸ್ತೀನಿನ ಕುರಿತು ದುಆಗಳನ್ನು ಮಾಡಲು ನಾನು ಗಮನ ಸೆಳೆಯುತ್ತಾ ಬಂದಿದ್ದೇನೆ. ಯುದ್ಧವಿರಾಮ ಕೆಲವು ಕಾಲಕ್ಕೆ ಆಗುವುದು ಎಂದು ಕೆಲವು ಪಕ್ಷಗಳು ಭಾವಿಸುತ್ತಿರುವುದಾಗಿ ತೋರುತ್ತಿದೆ. ಆದರೆ ಯುದ್ಧವಿರಾಮ ಉಂಟಾದರೂ ಕೂಡ ಪೆಲಸ್ತೀನಿಯರ ಮೇಲೆ ದೌರ್ಜನ್ಯ ಕೊನೆಗೊಳ್ಳದು ಎಂದು ಸ್ಥಿತಿಗತಿಗಳನ್ನು ನೋಡುವಾಗ ತೋರುತ್ತಿದೆ. ಆದ್ದರಿಂದ ಧಾರಾಳವಾಗಿ ದುಆಗಳನ್ನು ಮಾಡಬೇಕಾಗಿದೆ.

ಕೆಲವು ದಿನಗಳ ಹಿಂದೆ ವಾಲ್ವ್ (volve) ಬದಲಾಯಿಸುವ ಪ್ರಕ್ರಿಯೆ ನಡೆದಿದೆ. ಅಲ್‌ಹಮ್ದುಲಿಲ್ಲಾಹ್. ಅಲ್ಲಾಹನ ಕೃಪೆಯಿಂದ ಈಗ ಆಗಬೇಕಿದ್ದ ವೈದ್ಯಕೀಯ ಚಿಕಿತ್ಸೆ ಯಶಸ್ವಿಯಾಗಿದೆ ಎನ್ನುತ್ತಾರೆ ವೈದ್ಯರು. ಅಲ್ಲಾಹನು ದಯಪಾಲಿಸುವಷ್ಟು ಜೀವನ ಸಕ್ರಿಯ ಜೀವನವಾಗಿರಲಿ ಎಂದು ಪ್ರಾರ್ಥಿಸಿರಿ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **03–05–2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ۔ بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ۔ اَلرَّحْمٰنِ الرَّحِيمِ۔ مٰلِكِ يَوْمِ الدِّينِ۔

إِيَّاكَ نَعْبُدُ وَإِيَّاكَ نَسْتَعِينُ۔ اِهْدِنَا الصِّرَاطَ الْمُسْتَقِيمَ۔

صِرَاطَ الَّذِينَ أَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّالِّينَ۔

ಹಮ್‌ರಾಉಲ್ ಅಸದ್ ಯುದ್ಧದ ಪ್ರಸ್ತಾಪ ನಡೆಯುತ್ತಿತ್ತು. ಉಹುದ್ ಯುದ್ಧದಿಂದ ಮದೀನಕ್ಕೆ ಮರಳಿದ್ದು ಮತ್ತು ಹಮ್‌ರಾಉಲ್ ಅಸದ್ ಯುದ್ಧಕ್ಕೆ ಸಂಬಂಧಪಟ್ಟು ಹಝ್ರ‌ತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ)ರ ಪ್ರಸ್ತಾಪವನ್ನು ನಾನು ವಿವರಿಸುತ್ತೇನೆ.

ಅವರು ಹೇಳುತ್ತಾರೆ: ಉಹುದ್ ಯುದ್ಧದಿಂದ ಮರಳಿದ ರಾತ್ರಿಯು ಮದೀನದಲ್ಲಿ ತೀವ್ರ ಭಯದ ಒಂದು ರಾತ್ರಿಯಾಗಿತ್ತು. ಏಕೆಂದರೆ, ಬಾಹ್ಯ ದೃಷ್ಟಿಯಲ್ಲಿ ಖುರೈಶಿನ ಸೈನ್ಯ ಮಕ್ಕದ ಕಡೆಗೆ ಹೋಗಿದ್ದರೂ ಕೂಡ ಮಕ್ಕಕ್ಕೆ ಮರಳಿದ್ದಾಗಿ ಮುಸ್ಲಿಮರು ಭಾವಿಸಲಿ ಎಂಬ ಉದ್ದೇಶದಿಂದ ಹಾಗೆ ಮಾಡಿರಬಹುದು ಎಂಬ ಸಂಶಯವಿತ್ತು. ಆದ್ದರಿಂದ ಮದೀನದಲ್ಲಿ ಅಂದು ರಾತ್ರಿ ಕಾವಲಿನ ಏರ್ಪಾಡು ಮಾಡಲಾಯಿತು. ಹಝ್ರ‌ತ್ ಪೈಗಂಬರ್(ಸ)ರ ಮನೆಗೂ ಸಹಾಬಿಯರು ವಿಶೇಷವಾದ ಕಾವಲು ನೀಡಿದರು. ಈ ಸಂಶಯ ಸರಿಯಾಗಿತ್ತು ಎಂದು ಬೆಳಗಾದಾಗ ತಿಳಿದುಬಂತು. ಏಕೆಂದರೆ, ಖುರೈಶಿನ ಸೈನ್ಯ ಮದೀನದಿಂದ ಕೆಲವು ಮೈಲುಗಳಷ್ಟು ದೂರ ಹೋಗಿ ತಂಗಿರುವುದಾಗಿ

ಬೆಳಿಗ್ಗೆ ಆಗುವುದಕ್ಕೆ ಮುಂಚಿತವಾಗಿ ಹಝ್ರತ್ ಪೈಗಂಬರ್(ಸ)ರಿಗೆ ಮಾಹಿತಿ ಲಭಿಸಿತು. ಖುರೈಶಿನ ಸರದಾರರು ಚರ್ಚೆ ಮಾಡುತ್ತಿದ್ದರು. ಒಂದು ಗುಂಪು ಹೀಗೆ ಹೇಳುತ್ತಿತ್ತು: 'ನೀವು ಮುಹಮ್ಮದನ್ನು ವಧಿಸಿಲ್ಲ, ಮುಸ್ಲಿಮ್ ಮಹಿಳೆಯರನ್ನು ದಾಸಿಯರನ್ನಾಗಿ ಮಾಡಿಯೂ ಇಲ್ಲ. ಮುಸ್ಲಿಮರ ಸಂಪತ್ತನ್ನೂ ವಶಪಡಿಸಿಲ್ಲ, ಬದಲಾಗಿ ನೀವು ವಿಜಯ ಸಾಧಿಸಿಯೂ ಅವರನ್ನು ಹಾಗೆಯೇ ಬಿಟ್ಟು ಬಂದಿದ್ದೀರಿ. ಆದ್ದರಿಂದ ಅವರು ಪುನಃ ಸುಶಕ್ತರಾಗಿ ನಿಮ್ಮನ್ನು ಹಿಡಿಯುವರು. ಒಟ್ಟಿನಲ್ಲಿ, ಈಗಲೂ ಅವಕಾಶವಿದೆ. ನೀವು ಮರಳಿ ಹೋಗಿರಿ ಮತ್ತು ಮದೀನದ ಮೇಲೆ ದಾಳಿ ನಡೆಸಿ ಮುಸ್ಲಿಮರ ಬೇರನ್ನು ಕತ್ತರಿಸಿರಿ.' ಆದರೆ ಮತ್ತೊಂದು ಗುಂಪು ಹೀಗೆ ಹೇಳುತ್ತಿತ್ತು: 'ನಿಮಗೆ ಲಭಿಸಿದ ವಿಜಯವನ್ನೇ ಸೌಭಾಗ್ಯವೆಂದು ಭಾವಿಸಿ ಮರಳಿ ಹೋಗಿರಿ. ಈ ವಿಜಯ ಕೂಡ ಪರಾಜಯವಾಗದಿರಲಿ.' ಹಝ್ರತ್ ಪೈಗಂಬರ್(ಸ)ರಿಗೆ ಇದರ ಸುದ್ದಿ ಲಭಿಸಿದಾಗ ಬೇಗನೇ ಹೊರಡಲು ಘೋಷಣೆ ಮಾಡಿಸಿದರು ಮತ್ತು ಉಹುದ್ ಯುದ್ಧಕ್ಕೆ ಹೋದವರು ಹೊರತು ಬೇರೆ ಯಾರೂ ನಮ್ಮ ಜೊತೆಗೆ ಹೊರಡದಿರಲಿ ಎಂದೂ ನಿರ್ದೇಶನ ನೀಡಿದರು. ಉಹುದಿನ ಯೋಧರು ತಮ್ಮ ಗಾಯಗಳಿಗೆ ಮದ್ದು ಕಟ್ಟಿ ತಮ್ಮ ಪ್ರಿಯ ನೇತಾರನೊಂದಿಗೆ ಹೊರಟರು. ಎಂಟು ಮೈಲುಗಳ ದೂರವನ್ನು ದಾಟಿ ಹಝ್ರತ್ ಪೈಗಂಬರ್(ಸ) ಹಮ್‌ರಾಉಲ್ ಅಸದಿಗೆ ತಲುಪಿದರು. ಅಲ್ಲಿ ಆ ಮೈದಾನದಲ್ಲಿ ಇಬ್ಬರ ಮೃತದೇಹಗಳನ್ನು ಪಡೆದರು ಮತ್ತು ಪತ್ತೆ ಹಚ್ಚಿಸಿದಾಗ ಅದು ಹಝ್ರತ್ ಪೈಗಂಬರ್(ಸ)ರವರು ಕಳುಹಿಸಿದ ಖುರೈಷಿಯರ ಚಲನವಲನಗಳ ಬಗ್ಗೆ ಪತ್ತೆ ಹಚ್ಚಲು ಕಳುಹಿಸಿದ ದೂತರಾಗಿದ್ದರು ಆದರೆ ಅವರನ್ನು ಖುರೈಷಿಯರು ವಧಿಸಿದ್ದಾರೆ ಎಂದು ತಿಳಿದು ಬಂತು. ಹಝ್ರತ್ ಪೈಗಂಬರ್(ಸ)ರವರು ಆ ಇಬ್ಬರ ಶಹೀದರನ್ನು ಒಂದೇ ಖಬರ್‌ನಲ್ಲಿ ದಫನ್ ಮಾಡಿಸಿದರು. ಈಗ ಸಂಜೆಯ ಸಮಯ ಆಗಿದ್ದರಿಂದ ಅಲ್ಲಿ ಹಝ್ರತ್ ಪೈಗಂಬರ್(ಸ) ಅವರು ಬೆಂಕಿಯನ್ನು ಉರಿಸಲು ಆದೇಶ ನೀಡಿದರು. ಹೀಗೆ ಐನೂರು ಬೆಂಕಿಯ ಒಲೆಗಳನ್ನು ಉರಿಸಲಾಯಿತು. ಅಲ್ಲಿ ಮುಶ್ರಿಕ್ ಸರದಾರನಾದ ಮಅಬದ್ ಹಝ್ರತ್ ಪೈಗಂಬರ್(ಸ)ರನ್ನು ಭೇಟಿಯಾದನು. ಅನಂತರ ಆತನು ಮರಳಿ ಹೋಗಿ ತನ್ನ ಮಾತುಗಳಿಂದ ಅಬೂಸುಫ್‌ಯಾನ್ ಮತ್ತು ಖುರೈಶಿನ ಇತರ ಸರದಾರರ ಧೈರ್ಯಗುಂದಿಸಿದನು.

ಮಅಬದಿನ ಮಾತುಗಳಿಂದ ಎಂತಹ ಗಾಬರಿಯ ಸ್ಥಿತಿ ಉಂಟಾಯಿತು ಎಂದರೆ, ಅವರು ಮದೀನದ ಮೇಲೆ ದಾಳಿ ನಡೆಸುವ ಉದ್ದೇಶವನ್ನು ಕೈಬಿಟ್ಟು ಮಕ್ಕಾದ ಕಡೆಗೆ ಮರಳಿದರು. ಖುರೈಷರ ಸೈನ್ಯವು ಈ ರೀತಿ ಪಲಾಯನ ಮಾಡುವ ಸುದ್ದಿಯನ್ನು ಸ್ವೀಕರಿಸಿದ ಹಝ್ರತ್ ಪೈಗಂಬರ್(ಸ) ಅವರು ದೇವರಿಗೆ ಕೃತಜ್ಞತೆಗಳನ್ನು ಅರ್ಪಿಸಿ ಇದು ಸತ್ಯನಿಷೇಧಿಗಳ ಮನಸ್ಸಿನ ಮೇಲೆ ವಿಧಿಸಿದ ದೈವಭಯವಾಗಿದೆ ಎಂದು ಹೇಳಿದರು.

ಇದರ ವಿವರಣೆಯು ನಾನು ಹಳೇಇದ ಹಾಗೆ ಈಗಾಗಲೆ ಪ್ರಸ್ತಾಪಿಸಲಾಗಿದೆ, ಇದು ಅದರ ಸಾರಾಂಶವಾಗಿತ್ತು.

ಹಝ್ರತ್ ಪೈಗಂಬರ್(ಸ) ಹಮ್‌ರಾಉಲ್ ಅಸದ್‌ನಲ್ಲಿ ಎರಡು ಮೂರು ದಿನಗಳು ತಂಗಿದರು ಮತ್ತು ನಂತರ ಐದು ದಿನಗಳ ಅನುಪಸ್ಥಿತಿಯ ನಂತರ ಮದೀನಾಗೆ ಮರಳಿದರು. ಈ ಅಭಿಯಾನದಲ್ಲಿ, ಇಬ್ಬರು ಖುರೈಷ್ ಸೈನಿಕರು, ಅವರಲ್ಲಿ ಒಬ್ಬನು ದ್ರೋಹಿ ಮತ್ತೊಬ್ಬನು ಗೂಢಚಾರನಾಗಿದ್ದನು. ಮುಸ್ಲಿಮರಿಂದ ಸೆರೆಹಿಡಿಯಲ್ಪಟ್ಟಿದ್ದರು ಮತ್ತು ಯುದ್ಧದ ಕಾನೂನಿನಡಿಯಲ್ಲಿ ಮರಣದಂಡನೆಯಾಗಿರುವುದರಿಂದ, ಹಝ್ರತ್ ಪೈಗಂಬರ್(ಸ) ಅವರ ಆದೇಶದಂತೆ ಅವರನ್ನು ವಧಿಸಲಾಯಿತು. ಅವರಲ್ಲಿ ಒಬ್ಬ ಮಕ್ಕಾದ ಪ್ರಸಿದ್ಧ ಕವಿ ಅಬು ಉಝ್ಝಾ ಆಗಿದ್ದನು, ಅವನು ಬದ್ರ್ ಕದನದಲ್ಲಿ ಮುಸ್ಲಿಮರಿಂದ ಬಂಧಿಸಲ್ಪಟ್ಟಿದ್ದನು, ನಂತರ ಅವನ ಕ್ಷಮೆಯಾಚಿಸಿದನು ಅದೇ ರೀತಿ ಮುಸ್ಲಿಮರೊಂದಿಗೆ ಎಂದಿಗೂ ಯುದ್ಧವಾಡುವುದಿಲ್ಲ ಎಂದು ಭರವಸೆ ನೀಡಿದ ನಂತರ ಹಝ್ರತ್ ಪೈಗಂಬರ್(ಸ) ಅವನನ್ನು ಬಿಡುಗಡೆ ಮಾಡಿದರು. ಆದರೆ ಆತನು ಮತ್ತೆ ದ್ರೋಹ ಮಾಡಿ ಮುಸ್ಲಿಮರ ವಿರುದ್ಧ ಯುದ್ಧದಲ್ಲಿ ಭಾಗವಹಿಸಿದನು ಮತ್ತು ತಾನು ಸ್ವತಃ ಯುದ್ಧದಲ್ಲಿ ಭಾಗಿಯಾಗಿದ್ದಲ್ಲದೆ ತನ್ನ ಪ್ರಚೋದನಕಾರಿ ಕವಿತೆಗಳಿಂದ ಇತರರನ್ನು ಪ್ರೇರೇಪಿಸಿದನು. ಏಕೆಂದರೆ ಅಂತಹ ವ್ಯಕ್ತಿಯ ವಿಶ್ವಾಸಘಾತುಕತನವು ಮುಸ್ಲಿಮರಿಗೆ ತುಂಬಾ ಹಾನಿಕಾರಕವಾಗಿತ್ತು. ಆದ್ದರಿಂದ ಈಗ, ಅವನು ಮತ್ತೆ ಮುಸ್ಲಿಮರಿಂದ ಬಂಧಿಸಲ್ಪಟ್ಟಾಗ, ಹಝ್ರತ್ ಪೈಗಂಬರ್(ಸ) ಅವನನ್ನು ವಧಿಸಲು ಆದೇಶಿಸಿದರು. ಅಬು ಉಝ್ಝಾ ಪುನಃ ಮೊದಲಿನಂತೆ ಮೌಖಿಕ ಕ್ಷಮೆಯಿಂದ ಮುಕ್ತನಾಗಲು ಬಯಸಿದನು, ಆದರೆ ಹಝ್ರತ್ ಪೈಗಂಬರ್(ಸ) ನಿರಾಕರಿಸುತ್ತಾ ಹೇಳಿದರು: **ಲಾ ಯುಲ್‌ದಗ್ಗುಲ್‌ಮುಮಿನು ಮಿನ್ ಜುಹ್‌ರಿನ್ ವಾಹಿದಿನ್ ಮರ್ರತೈನಿ** ಅಂದರೆ ಸತ್ಯವಿಶ್ವಾಸಿಯು ಒಂದು ರಂಧ್ರದಿಂದ ಎರಡು ಬಾರಿ ಕಚ್ಚಿಸಿಕೊಳ್ಳುವುದಿಲ್ಲ." (ಇಬ್ನ್ ಹಿಶಾಮ್) ಇನ್ನೊಬ್ಬ ಖೈದಿ ಮುಆವಿಯಾ ಬಿನ್ ಮುಗೀರಾ. ಈ ವ್ಯಕ್ತಿಯು ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ) ಅವರ ಸಂಬಂಧಿಕರಲ್ಲಿ ಒಬ್ಬನಾಗಿದ್ದನು, ಆದರೆ ಅವನು ಇಸ್ಲಾಂ ಧರ್ಮದ ಪ್ರಬಲ ವಿರೋಧಿಯಾಗಿದ್ದನು. ಉಹುದ್ ಯುದ್ಧದ ನಂತರ, ಅವನು ರಹಸ್ಯವಾಗಿ ಮದೀನಾದಲ್ಲಿ ಅಲೆದಾಡುತ್ತಿದ್ದನು, ಆದರೆ ಸಹಾಬೀಯರು ಅವನನ್ನು ನೋಡಿ ಅವನನ್ನು ಸೆರೆಹಿಡಿದು ಹಝ್ರತ್ ಪೈಗಂಬರ್(ಸ) ಅವರ ಸೇವೆಗೆ ಕರೆತಂದರು. ಹಝ್ರತ್ ಉಸ್ಮಾನ್(ರ) ಅವರ ಶಿಫಾರಸಿನ ಮೇರೆಗೆ, ಅವರು ಮೂರು ದಿನಗಳಲ್ಲಿ ಮರಳಿ ಹೋಗುವುದಾಗಿ ಭರವಸೆ ನೀಡಿದರು, ಇಲ್ಲದಿದ್ದರೆ ಗೂಢಚಾರಿಕೆಗೆ ಶಿಕ್ಷೆಗೆ ನಿಮ್ಮನ್ನು ವಧಿಸಲಾಗುವುದು." ಮೊದಲು ಆತನಿಗೆ ಮೂರು ದಿನದೊಳಗೆ ಮರಳಿ ಹೋಗುವಂತೆ ಎಚ್ಚರಿಕೆ ನೀಡಲಾಗಿತ್ತು. "ನಾನು ಮೂರು ದಿನಗಳವರೆಗೆ ಹೊರಡುತ್ತೇನೆ ಎಂದು ಮುಆವಿಯಾ ಭರವಸೆ ನೀಡಿದನು, ಆದರೆ ಈ ಅವಧಿ ಮುಗಿದ ನಂತರವು, ಅವನು ಇನ್ನೂ ರಹಸ್ಯವಾಗಿ ಅಲ್ಲಿಗೆ ಹೋಗುತ್ತಿರುವುದು ಕಂಡುಬಂದಿದ್ದರಿಂದ ಆತನನ್ನು ವಧಿಸಲಾಯಿತು. ಅವನ ಉದ್ದೇಶ ಏನೆಂದು ಇತಿಹಾಸದಲ್ಲಿ ಉಲ್ಲೇಖಿಸಲಾಗಿಲ್ಲ, ಆದರೆ ಮದೀನಾ ಪ್ರದೇಶದಲ್ಲಿ ರಹಸ್ಯವಾಗಿ ಉಳಿದುಕೊಳ್ಳುವುದು ಮತ್ತು ಎಚ್ಚರಿಕೆಯ ಅವಧಿಯ ನಂತರವೂ ಅಲ್ಲಿಯೇ ಉಳಿಯುವುದು ಅವನು ಯಾವುದೊ ಅಪಾಯಕಾರಿ ಉದ್ದೇಶದಿಂದ ಅಲ್ಲಿ ತಂಗಿದ್ದನೆಂದು ತೋರಿಸುತ್ತದೆ. ಮತ್ತು ಆತನು ಉಹುದ್ ಕ್ಷೇತ್ರದಲ್ಲಿ ಹಝ್ರತ್ ಪೈಗಂಬರ್(ಸ) ಅವರು ಜೀವಂತವಾಗಿ ಉಳಿದಿದ್ದರಿಂದ ತಳಮಳಗೊಂಡು ಮದೀನದಲ್ಲಿ ಹಝ್ರತ್ ಪೈಗಂಬರ್(ಸ) ಅವರ ವಿರುದ್ಧ ಯಾವುದಾದರು ದುರುದ್ದೇಶದಿಂದ ಪಲಾಯನ ಮಾಡಿರುವುದು ಆಶ್ಚರ್ಯವೇನಿಲ್ಲ ಮತ್ತು ಉಹೂದ್ ಹಾಗೂ ಕಪಟವಿಶ್ವಾಸಿಗಳೊಂದಿಗೆ ಸೇರಿ ರಹಸ್ಯವಾಗಿ ಒಳಸಂಚು ರೂಪಿಸಿರಬಹುದು ಆದರೆ ಸರ್ವಶಕ್ತನಾದ ಅಲ್ಲಾಹನು ರಕ್ಷಿಸಿದನು ಮತ್ತು ಆತನ ಉದ್ದೇಶವು ವಿಫಲವಾಯಿತು."

(ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ–504–506)

ಉಹುದ್ ಯುದ್ಧದ ಫಲಿತಾಂಶದ ಕುರಿತು ಚರಿತ್ರೆಗಾರರು ಬಹಳ ದೀರ್ಘವಾಗಿ ಚರ್ಚಿಸಿರುವರು. ಕೆಲವು ಚರಿತ್ರೆಗಾರರು ಅದನ್ನು ಪರಾಜಯವಾಗಿ ಗಣಿಸುತ್ತಾರೆ. ಕೆಲವರು ಅದನ್ನು ಪರಾಜಯವಾಗಿ ಹೇಳಲು ಹಿಂಜರಿಯುತ್ತಾರೆ. ಅವರು ಎರಡೂ ಅಲ್ಲದ ಒಂದು ಅಭಿಪ್ರಾಯವನ್ನು ಇರಿಸಲು ಬಯಸುತ್ತಾರೆ. ಅದನ್ನು ಪರಾಜಯದ ನಂತರದ ವಿಜಯವಾಗಿ ಗಣಿಸುವ ಕೆಲವರೂ ಇದ್ದಾರೆ. ನಿಜವೇನೆಂದರೆ, ಆ ಕಾಲದ ಯುದ್ಧ ನಿಯಮಗಳು ಮತ್ತು ಸಂಪ್ರದಾಯದ ಪ್ರಕಾರ ಅದನ್ನು ಪರಾಜಯವೆಂದು ಕರೆಯಲು ಸಾಧ್ಯವಲ್ಲ. ಏಕೆಂದರೆ ಅಬೂಸುಫ್‌ಯಾನ್ ಘೋಷಣೆ ಕೂಗುತ್ತಾ ಮೈದಾನದಿಂದ ಹೊರಡುವಾಗಲೂ ಮುಸ್ಲಿಮರು ಯುದ್ಧ ಮೈದಾನದಲ್ಲಿ ಇದ್ದರು. 'ಇಂದಿನ ದಿನ ಬದ್ರ್ ಯುದ್ಧದ ಪ್ರತೀಕಾರವಾಗಿದೆ' ಎಂದು ಅಬೂಸುಫ್‌ಯಾನ್ ಪೊಳ್ಳು ಘೋಷಣೆ ಕೂಡ ಕೂಗಿದನು. ಆದರೆ ಅದು ಬದ್ರ್ ಯುದ್ಧದ ಪ್ರತೀಕಾರ ಹೇಗೆ ಆಗುವುದು? ಬದ್ರ್ ಯುದ್ಧದಲ್ಲಿ ಮುಸ್ಲಿಮರು ಸತ್ಯನಿಷೇಧಿಗಳ ದೊಡ್ಡ ದೊಡ್ಡ ಸರದಾರರನ್ನು ವಧಿಸಿದ್ದರು. ಅವರಿಗೆ ಅಪಾರ ಯುದ್ಧ ಸಂಪತ್ತು ಲಭಿಸಿತ್ತು. ಸತ್ಯನಿಷೇಧಿಗಳ ಎಪ್ಪತ್ತು ಮಂದಿಗಳನ್ನು ಬಂಧಿಸಲಾಗಿತ್ತು. ಅದೇ ರೀತಿಯಲ್ಲಿ ಬದ್ರ್‌ನಲ್ಲಿ ಮುಸ್ಲಿಮರು ವಿಜಯಿಗಳಾಗಿ ರೂಢಿಯಂತೆ ಅಲ್ಲಿ ಮೂರು ದಿನಗಳು ತಂಗಿದ್ದರು. ಆದರೆ ಉಹುದಿನಲ್ಲಿ ಸತ್ಯನಿಷೇಧಿಗಳಿಗೆ ಈ ಸಂಗತಿಗಳಲ್ಲಿ ಯಾವುದೇ ಒಂದು ಕೂಡ ಲಭಿಸಲಿಲ್ಲ. ಹೀಗಿರುವಾಗ ಇದು ಬದ್ರಿಗೆ ಪ್ರತೀಕಾರ ಹೇಗೆ ಆಗುವುದು? ಆದರೆ ಉಹುದಿನಲ್ಲಿ ಮೊದಲ ಹಂತದಲ್ಲಿ ವಿಜಯದ ನಂತರ ಎರಡನೇ ಹಂತದಲ್ಲಿ ಮುಸ್ಲಿಮರಿಗೆ ಕಠಿಣವಾದ ಜೀವ ನಷ್ಟ ಉಂಟಾಯಿತು ಎಂಬುದು ಸರಿಯೇ ಆಗಿದೆ, ಆದರೆ ಅಂತಿಮವಾಗಿ ಮುಸ್ಲಿಮರು ಉಹುದ್ ಕ್ಷೇತ್ರದಲ್ಲಿ ಉಳಿದರು. ಮತ್ತು ಸತ್ಯನಿಷೇಧಿಗಳಿಗೆ ಸಂಪೂರ್ಣ ಗೆಲುವು ಮತ್ತು ವಿಜಯವನ್ನು ಸಾಧಿಸುವುದರಿಂದ ಅದೃಶ್ಯ ಬೆಂಬಲವು ತನ್ನ ವೈಭವದಿಂದ ತಡೆಯಲಾಯಿತು ಮತ್ತು ತಾತ್ಕಾಲಿಕ ಪ್ರಾಬಲ್ಯದ ಹೊರತಾಗಿಯೂ, ಅವರು ಮುಸ್ಲಿಮರ ಮೇಲೆ ಮತ್ತಷ್ಟು ಹಾನಿಯನ್ನುಂಟುಮಾಡಲು ವಿಫಲರಾದರು ಮತ್ತು ಆ ಕಾಲದ ಯುದ್ಧ ಪದ್ಧತಿಗಳಿಗೆ ಅನುಗುಣವಾಗಿ ಅವರು ಉಹುದ್ ಕ್ಷೇತ್ರದಿಂದ ಹಿಮ್ಮೆಟ್ಟಿದರು. ಮತ್ತು ಮರುದಿನವೇ ಹಮ್ರಾಉಲ್ ಅಸದ್ ಕಡೆಗೆ ಮುಸ್ಲಿಮರ ಹಿಂಬಾಲಿಕೆಯನ್ನು ಒಟ್ಟಿಗೆ ನೋಡಿದಾಗ, ಉಹುದ್ ಯುದ್ಧವು ಪ್ರಕಾಶಮಾನವಾದ ಮತ್ತು ಸ್ಪಷ್ಟವಾದ ವಿಜಯದ ರೂಪದಲ್ಲಿ ಹೊರಹೊಮ್ಮುತ್ತದೆ ಮತ್ತು ಉಹುದ್ ಕ್ಷೇತ್ರದಲ್ಲಿ ಉಂಟಾದ ನಷ್ಟವು ಅದು ಮುಸ್ಲಿಮರ ಫಲಿತಾಂಶವಾಗಿದೆ ಮತ್ತು ನಂತರದ ಕಾಲಕ್ಕೆ ಅನೇಕ ಯುಕ್ತಿಗಳಿಗೆ ಮೂಲವಾಯಿತು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಸ್ಥಾಯಿಯಾದ ಪರಿಣಾಮಗಳ ದೃಷ್ಟಿಯಲ್ಲಿ ಉಹುದ್ ಯುದ್ಧವು ಬದ್ರ್ ಯುದ್ಧದ ಮುಂದೆ ಏನೂ ಅಲ್ಲ. ಆದರೆ ತಾತ್ಕಾಲಿಕವಾಗಿ ಈ ಯುದ್ಧ ಖಂಡಿತವಾಗಿಯೂ ಮುಸ್ಲಿಮರಿಗೆ ನಷ್ಟವನ್ನು ಉಂಟು ಮಾಡಿತು. ಮೊದಲನೆಯದಾಗಿ ಮುಸ್ಲಿಮರ ಎಪ್ಪತ್ತು ವ್ಯಕ್ತಿಗಳು ಶಹೀದ್ ಆದರು. ಅವರಲ್ಲಿ ಕೆಲವು ಶ್ರೇಷ್ಠ ಸಹಾಬಿಯರು ಕೂಡ ಒಳಪಡುತ್ತಾರೆ. ಗಾಯಾಳುಗಳ ಸಂಖ್ಯೆ ಬಹಳ ಅಧಿಕವಾಗಿತ್ತು. ಎರಡನೆಯದಾಗಿ, ಬದ್ರ್ ಯುದ್ಧದ ಪರಿಣಾಮವಾಗಿ ಗಾಬರಿಗೊಂಡಿದ್ದ ಮದೀನದ ಯಹೂದಿಯರು ಮತ್ತು ಕಪಟವಿಶ್ವಾಸಿಗಳು ಈಗ ಸ್ವಲ್ಪ ನಿರ್ಭೀತಗೊಂಡಿದ್ದಲದಲ್ಲದೆ ಅಬ್ದುಲ್ಲಾ ಬಿನ್ ಉಬೈ ಮತ್ತು ಅವನ ಸಂಗಡಿಗರು ಬಹಿರಂಗವಾಗಿ ಅವಹೇಳನೆ ಮಾಡುತ್ತಿದ್ದರು. ಮೂರನೆಯದಾಗಿ 'ನಾವು ಕೇವಲ ಸೇಡು ತೀರಿಸಿದ್ದಲ್ಲ, ಬದಲಾಗಿ ಮುಂದೆ ಎಂದಾದರೂ ಒಟ್ಟಾಗಿ ದಾಳಿ ನಡೆಸಿದರೆ ಮುಸ್ಲಿಮರನ್ನು ಸೋಲಿಸುವೆವು.' ಎಂದು ಅವರು ಭಾವಿಸಿಕೊಂಡರು. ನಾಲ್ಕನೆಯದಾಗಿ ಸಾಮಾನ್ಯ ಗೋತ್ರಗಳು ಕೂಡ ಉಹುದ್ ಯುದ್ಧದ ನಂತರ ಹೆಚ್ಚು ಧೈರ್ಯದಿಂದ ತಲೆ ಎತ್ತಲು ಶುರುಮಾಡಿದುವು. ಆದರೆ ಈ ನಷ್ಟಗಳಿದ್ದೂ ಕೂಡ ಒಂದು ಸ್ಪಷ್ಟವಾದ ಸತ್ಯವೇನೆಂದರೆ, ಬದ್ರ್ ಯುದ್ಧದಲ್ಲಿ ಖುರೈಶಿಯರಿಗೆ ಉಂಟಾದ ನಷ್ಟಗಳು ಉಹುದ್ ಯುದ್ಧದ ವಿಜಯದಿಂದ ಪರಿಹಾರಗೊಳ್ಳದು. ಬದ್ರ್ ಯುದ್ಧದಲ್ಲಿ, ಖುರೈಷ್ ಸನುದಾಯದ ಜೀವನದ ಆತ್ಮವಾಗಿದ್ದ ಮಕ್ಕಾದ ಎಲ್ಲಾ ಮುಖ್ಯಸ್ಥರು ಕೊಲ್ಲಲ್ಪಟ್ಟರು ಮತ್ತು ಪವಿತ್ರ ಖುರ್‌ಆನ್ ವಿವರಿಸಿದಂತೆ, ಈ ಸಮುದಾಯದ ಬೇರನ್ನು ನಿಜವಾದ ಅರ್ಥದಲ್ಲಿ ಕತ್ತರಿಸಲಾಯಿತು, ಮತ್ತು ಇದೆಲ್ಲವು ಅವರ ದೃಷ್ಟಿಯಲ್ಲಿ ಸಂಪೂರ್ಣವಾಗಿ ತಿರಸ್ಕಾರಕ್ಕೆ ಒಳಗಾದ ಸಮುದಾಯದ ಕೈಯಲ್ಲಿ ಇದೆಲ್ಲವೂ ಸಂಭವಿಸಿತು. ಇದಕ್ಕೆ ಹೋಲಿಸಿದರೆ, ವಾಸ್ತವವಾಗಿ, ಉಹದ್ ಕ್ಷೇತ್ರದಲ್ಲಿ ಮುಸ್ಲಿಮರು ನಷ್ಟವನ್ನು ಅನುಭವಿಸಿದರು, ಆದರೆ ಖುರೈಷಿಯರಿಗೆ ಬದ್ರ್‌ನಲ್ಲಿ ತಲುಪಿದ ನಷ್ಟಕ್ಕಿಂದ ಬಹಳ ಕಡಿಮೆ ಮತ್ತು ತಾತ್ಕಾಲಿಕವಾಗಿತ್ತು.

ಇಸ್ಲಾಂ ಸಮಾಜದ ಕೇಂದ್ರ ಬಿಂದುವಾಗಿದ್ದ ಖುರೈಷಿಗಳ ಹಗೆತನಕ್ಕೆ ಗುರಿಯಾಗಿದ್ದ ಹಝ್ರತ್ ಪೈಗಂಬರ್(ಸ) ದೇವರ ದಯೆಯಿಂದ ಜೀವಂತವಾಗಿದ್ದರು. ಇದಲ್ಲದೇ ಹಿರಿಯ ಸಹಾಬೀಯರಲ್ಲಿ ಒಂದೆರಡನ್ನು ಹೊರತುಪಡಿಸಿ ಎಲ್ಲರೂ ಸುರಕ್ಷಿತವಾಗಿದ್ದರು. ಅದೇ ರೀತಿ ಮುಸ್ಲಿಮರ ಈ ಸೋಲು ಅವರ ಸೈನಿಕರಿಗಿಂತ ಹಲವು ಪಟ್ಟು ಹೆಚ್ಚು ಮತ್ತು ಯುದ್ಧ ಸಲಕರಣೆಗಳ ವಿಷಯದಲ್ಲಿ ಹಲವು ಪಟ್ಟು ಬಲಶಾಲಿಯಾದ ಅಂತಹ ಸೈನ್ಯದ ವಿರುದ್ಧವಾಗಿತ್ತು. ಆದ್ದರಿಂದ ಮುಸ್ಲಿಮರಿಗೆ, ಬದ್ರ್‌ನ ಮಹಾ ವಿಜಯಕ್ಕೆ ಹೋಲಿಸಿದರೆ ಉಹದ್‌ನ ನಷ್ಟವು ಕಿರಿಯದಾಗಿದೆ ಮತ್ತು ಉಹುದಿನಲ್ಲಿ ಉಂಟಾದ ನಷ್ಟಗಳು ಒಂದು ರೀತಿಯಲ್ಲಿ ಮುಸ್ಲಿಮರಿಗೆ ಬಹಳ ಉಪಯುಕ್ತವಾಯಿತು. ಏಕೆಂದರೆ, ಹಝ್ರತ್ ಪೈಗಂಬರ್(ಸ)ರ ಇಚ್ಛೆ ಮತ್ತು ನಿರ್ದೇಶನಕ್ಕೆ ವಿರುದ್ಧವಾಗಿ ಹೆಜ್ಜೆ ಹಾಕುವುದು ಎಂದಿಗೂ ವಿಜಯಕ್ಕೂ ಅಭಿವೃದ್ಧಿಗೂ ಕಾರಣವಾಗದು ಎಂದು ಮುಸ್ಲಿಮರಿಗೆ ಹಗಲಿನ ಬೆಳಕಿನಂತೆ ಸ್ಪಷ್ಟವಾಯಿತು.

ಮದೀನದಲ್ಲಿ ತಂಗಬೇಕು ಎಂಬ ಅಭಿಪ್ರಾಯವನ್ನು ಹಝ್ರತ್ ಪೈಗಂಬರ್(ಸ) ಹೊಂದಿದ್ದರು. ಈ ಸಂಬಂಧವಾಗಿ ತನ್ನ ಒಂದು ಕನಸನ್ನು ಕೂಡ ಅವರು ತಿಳಿಸಿದ್ದರು. ಆದರೆ ಮದೀನದಿಂದ ಹೊರಗೆ ಹೋಗಿ ಯುದ್ಧ ಮಾಡಲು ಜನರು ಒತ್ತಾಯಪಡಿಸಿದರು. ಹಝ್ರತ್ ಪೈಗಂಬರ್(ಸ) ಕೆಲವು ಜನರನ್ನು ಉಹುದಿನ ಒಂದು ಗುಡ್ಡೆಯಲ್ಲಿ ನಿಲ್ಲಿಸಿದರು ಮತ್ತು ಆ ಜಾಗವನ್ನು ಬಿಡಬಾರದು ಎಂದು ಬಹಳವಾಗಿ ತಾಕೀತು ಮಾಡಿದ್ದರು. ಆದರೆ ಯುದ್ಧ ಸಂಪತ್ತಿನ ಚಿಂತೆಯಿಂದ ಆ ಜಾಗವನ್ನು ಅವರು ಖಾಲಿಯಾಗಿ ಬಿಟ್ಟರು ಮತ್ತು ಈ ದೌರ್ಬಲ್ಯವು ಒಂದು ಸೀಮಿತವಾದ ಗುಂಪಿನಿಂದ ಸಂಭವಿಸಿತು ಆದರೆ ಮಾನವ ನಾಗರಿಕತೆಯು ಎಲ್ಲರನ್ನೂ ಒಂದೇ ದಾರದಲ್ಲಿ ಪೋಣಿಸಿರುತ್ತದೆ ಆದ್ದರಂದ ಈ ದೌರ್ಬಲ್ಯದಿಂದ ಎಲ್ಲರೂ ನಷ್ಟವನ್ನು ಅನುಭವಿಸಿದರು ಉದಾಹರಣೆಗೆ ಯಾವುದಾದರು ಪ್ರಯೋಜನವಿರುತ್ತಿದ್ದರೆ ಅದನ್ನು ಎಲ್ಲರು ಅನುಭವಿಸುತ್ತಿದ್ದರು, ಆದ್ದರಿಂದ ಇದು ತತ್ವದ ವಿಷಯವಾಗಿದೆ. ಕೆಲವರ ದೌರ್ಬಲ್ಯಗಳ ಕಾರಣದಿಂದ ಕೆಲವೊಮ್ಮೆ ಇಡೀ ಸಮಾಜಕ್ಕೆ ಹಾನಿ ಉಂಟಾಗುತ್ತದೆ. ಅಂತೆಯೇ, ಪ್ರಯೋಜನವು ಇಡೀ ಸಮಾಜದ ಮೇಲೆ ಉತ್ತಮ ಪರಿಣಾಮವನ್ನು ಉಂಟುಮಾಡುತ್ತದೆ. ಈಗ ಜಗತ್ತಿನಲ್ಲಿ ಅನೇಕ ಜನರು ಅಹ್ಮದಿಯಾ ಜಮಾಅತ್‌ನ ಪರವಾಗಿ ಮಾತನಾಡುವುದನ್ನು ನಾವು ನೋಡುತ್ತೇವೆ. ಈಗ ನೂರು ಶತಕ ಅಹ್ಮದಿಯರು ಉತ್ತಮ ಗುಣಮಟ್ಟದವರಲ್ಲ, ಆದರೆ ಉತ್ತಮ ಪ್ರಭಾವ ಹೊಂದಿರುವ ಕೆಲವರ ಕಾರಣದಿಂದಾಗಿ ಉಳಿದವರನ್ನು ಸಹ ಜನರು ಉತ್ತಮ ಗುಣಮಟ್ಟದವರು ಎಂದು ಪರಿಗಣಿಸುತ್ತಾರೆ.

"ಒಟ್ಟಿನಲ್ಲಿ ಉಹುದಿನ ಸೋಲು ಒಂದು ರೀತಿಯಲ್ಲಿ ನೋವಿಗೆ ಕಾರಣವಾಗಿದ್ದರೂ ಮತ್ತೊಂದು ರೀತಿಯಲ್ಲಿ ಮುಸ್ಲಿಮರಿಗೆ ಅದು ಒಂದು ಉಪಯುಕ್ತವಾದ ಪಾಠವಾಯಿತು. ಮತ್ತು ದುಃಖದ ವಿಷಯದಲ್ಲಿಯೂ ಇದು ಮುಸ್ಲಿಮರ ಹಾದಿಯಲ್ಲಿ ಸಂಭವಿಸಿದ ತಾತ್ಕಾಲಿಕ ನಿಲುಗಡೆಯಾಗಿದೆ. ಆ ನಂತರ ಎಲ್ಲೋ ನಿಲ್ಲಿಸಿ ಎಡವಿ ಬೀಳುವ ಮೂಲಕ ವೇಗವಾಗಿ ಬರುವ ಮಹಾಪ್ರವಾಹದಂತೆಯೇ ಮುಸ್ಲಿಮರು ತಮ್ಮ ಗಮ್ಯಸ್ಥಾನದ ಕಡೆಗೆ ವೇಗವಾಗಿ ಸಾಗಿದರು." (ಸೀರತ್ ಖಾತಮುನ್ನಬೀಯೀನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ 506–507)

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್ಮಹುಲ್ಲಾಹ್) ಒಂದು ಭಾಷಣದಲ್ಲಿ ಉಹುದ್ ಯುದ್ಧ ಮತ್ತು ಹಮ್‌ರಾಉಲ್ ಅಸದ್‌ನ ಘಟನೆಗಳ ಒಂದು ವಿಶ್ಲೇಷಣೆ ನಡೆಸಿದ್ದಾರೆ. ಅದರ ಕೆಲವು ಮುಖ್ಯಾಂಶಗಳು ಹೀಗಿವೆ: 1. ಮುಸ್ಲಿಮರಿಂದ ಸೋಲಿನ ಭಾವನೆಯನ್ನು ಪೂರ್ಣವಾಗಿ ಅಳಿಸಿಹಾಕಲು ಇದಕ್ಕಿಂತ ಉತ್ತಮವಾದ ಬೇರೆ ಹೆಜ್ಜೆ (ಹಮ್‌ರಾಉಲ್ ಅಸದ್ ಯುದ್ಧಕ್ಕಾಗಿ ಹೋಗುವುದಕ್ಕಿಂತ ಉತ್ತಮವಾದ ಹೆಜ್ಜೆ) ಸಾಧ್ಯವಿರಲಿಲ್ಲ.

2. ಆಯಾಸಗೊಂಡಿರದ ಯುವಕರಿಗೆ ಮತ್ತು ಹೊಸ ಯೋಧರಿಗೆ ಈ ಯುದ್ಧಕ್ಕಾಗಿ ಹೋಗಲು ಅನುಮತಿ ಕೊಡದೇ ಹಝ್ರತ್ ಪೈಗಂಬರ್(ಸ) ತನಗೆ ನಿಜವಾದ ಭರವಸೆ ತನ್ನ ಪ್ರಭುವಿನ ಮೇಲೆ ಮಾತ್ರವಾಗಿದೆ ಎಂದು ಸಾಬೀತು ಪಡಿಸಿದರು.

3. ಉಹುದ್ ಯುದ್ಧದಲ್ಲಿ ಚಂಚಲಗೊಂಡಿದ್ದ ಸಹಾಬಿಯರನ್ನು ಹಝ್ರತ್ ಪೈಗಂಬರ್(ಸ) ಸಾಂತ್ವನಪಡಿಸಿದರು ಮತ್ತು ಅವರ ಮೇಲೆ ಪೂರ್ಣವಾದ ವಿಶ್ವಾಸವನ್ನು ಇರಿಸಿಕೊಂಡರು.

4. ಹಝ್ರತ್ ಪೈಗಂಬರ್(ಸ)ರಿಗೆ ಉಹುದಿನ ಸಹಾಬಿಯರ ಮೇಲೆ ಇದ್ದ ಪರಿಪೂರ್ಣ ವಿಶ್ವಾಸವು ಕೇವಲ ಭಾವುಕರಾಗಿ ಮಾಡಿದ ತೀರ್ಮಾನವಾಗಿರಲಿಲ್ಲ. ಬದಲಾಗಿ ಉಹುದ್ ಯುದ್ಧದ ಮರುದಿನವೇ ಶತ್ರುಗಳನ್ನು ಹಿಂಬಾಲಿಸಲು ಮಾಡಿದ ಹಝ್ರತ್ ಪೈಗಂಬರ್(ಸ)ರ ತೀರ್ಮಾನ ತನ್ನ ಸಂಗಡಿಗರ ಮೇಲೆ ಮಾಡಿದ ಒಂದು ಮಹತ್ತಾದ ಉಪಕಾರವಾಗಿದೆ. ಹೀಗೆ ಎಂದಿಗೂ ಯಾವನೇ ಸೇನಾಧಿಪತಿ ತನ್ನ ಸೇನೆಯ ಮೇಲೆ ಮಾಡಿಲ್ಲ. ಹೀಗೆ ಉಹುದ್ ಯುದ್ಧದಲ್ಲಿ ಮಾಡಿದ ವರ್ತನೆಯಿಂದ ಸಹಾಬಿಯರಿಗೆ ಉಂಟಾದ ನೋವಿಗೆ ಪರಿಪೂರ್ಣವಾದ ಶಮನವನ್ನು ಹಝ್ರತ್ ಪೈಗಂಬರ್(ಸ) ನೀಡಿದರು. **ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ವ ಬಾರಿಕ್ ಸಲ್ಲಿಂ ಇನ್ನಕ ಹಮೀದುಮ್ಮಜೀದ್.**

5. ಹಝ್ರತ್ ಪೈಗಂಬರ್(ಸ)ರ ಈ ತೀರ್ಮಾನಗಳು ಕೇವಲ ವೈಯಕ್ತಿಕ ಮತ್ತು ನೈತಿಕ ಉದ್ದೇಶದಿಂದ ಆಗಿರಲಿಲ್ಲ, ಬದಲಾಗಿ ಯುದ್ಧ ದೃಷ್ಟಿಯಿಂದಲೂ ಅದು ಅತ್ಯಂತ ಉಪಯುಕ್ತವಾಗಿತ್ತು ಎಂದು ನಂತರದ ಘಟನೆಗಳಿಂದ ಸಾಬೀತಾಯಿತು. ಹಝ್ರತ್ ಪೈಗಂಬರ್(ಸ) ತನ್ನ ಯುಕ್ತಿ ಮತ್ತು ಯೋಜನೆಯು ಮೂಲಕ ಮಾತ್ರ ಅನೇಕ ಮಹತ್ತಾದ ಪ್ರಯೋಜನಗಳನ್ನು ಗಳಿಸಿದರು. ಹಝ್ರತ್ ಪೈಗಂಬರ್(ಸ) ಮಾಡಿದ ಎಲ್ಲ ಯುದ್ಧಗಳ ಮೇಲೆ ದೃಷ್ಟಿ ಹಾಯಿಸುವಾಗ ಹಝ್ರತ್ ಪೈಗಂಬರ್(ಸ)ರ ಅತ್ಯುತ್ತಮ, ಅತುಲ್ಯ ಸಾಮರ್ಥ್ಯಗಳ ಬಗ್ಗೆ ಆಶ್ಚರ್ಯಕರವಾದ ಬೆಳಕು ಬೀಳುತ್ತದೆ. ಆದರೆ ಹಝ್ರತ್ ಪೈಗಂಬರ್(ಸ)ರ ಮೊದಲಿನ ಮತ್ತು ಕೊನೆಯ ಪದವಿ ಒಬ್ಬ ಯುದ್ಧ ಪರಿಣಿತ ಎಂಬ ರೀತಿಯಲ್ಲಿ ಅಲ್ಲ. ಬದಲಾಗಿ ಒಬ್ಬ ನೈತಿಕ ಮತ್ತು ಆಧ್ಯಾತ್ಮಿಕ ನೇತಾರ ಎಂಬ ಮಟ್ಟದಲ್ಲಿ ಆಗಿತ್ತು. ಅವರ ಕೈಯಲ್ಲಿ ಉನ್ನತ ನೈತಿಕ ಸ್ವಭಾವ ಗುಣಗಳ ಧ್ವಜ ನೀಡಲ್ಪಟ್ಟಿತ್ತು.

ಉನ್ನತ ನೈತಿಕ ಗುಣಗಳ ಧ್ವಜವನ್ನು ಮೇಲೆತ್ತುವ ಮತ್ತು ಮೇಲೆತ್ತುತ್ತಾ ಹೋಗುವ ಮಹತ್ತಾದ ಜಿಹಾದಿನಲ್ಲಿ ಅವರು ನಿರತರಾಗಿದ್ದರು. ಅದು ಎಂದಿಗೂ ಕೊನೆಗೊಳ್ಳದ ಎಂತಹ ಪ್ರಯತ್ನವಾಗಿತ್ತು ಎಂದರೆ, ಅದು ಯುದ್ಧದ ಸ್ಥಿತಿಗಳಲ್ಲಿ ಇದ್ದ ರೀತಿಯಲ್ಲೇ ಶಾಂತಿಯ ಸ್ಥಿತಿಯಲ್ಲೂ ಮುಂದುವರೆದಿತ್ತು. ಹಗಲಿನಲ್ಲಿಯು ಹಝ್ರತ್ ಪೈಗಂಬರ್(ಸ)ರವರು ಆ ಧ್ವಜವನ್ನು ರಕ್ಷಿಸಿದರು ಮತ್ತು ಇರುಳಿನಲ್ಲಿಯು ರಕ್ಷಿಸಿದರು. ಶತ್ರುಗಳು ಹಝ್ರತ್ ಪೈಗಂಬರ್(ಸ) ಅವರನ್ನು ಮತ್ತು ಅವರ ಸಹಾಬೀಯರ ಮೇಲೆ ತೀವ್ರವಾದ ದೈಹಿಕ ಹೊಡೆತಗಳನ್ನು ಉಂಟುಮಾಡುವಲ್ಲಿ ಮತ್ತು ದುರಂತ ಹೊಡೆತಗಳನ್ನು ಉಂಟುಮಾಡುವಲ್ಲಿ ಪದೇ ಪದೇ ಯಶಸ್ವಿಯಾದರು, ಆದರೆ ನೈತಿಕತೆಯ ಈ ಧ್ವಜಕ್ಕೆ ಕನಿಷ್ಠ ಬೆಂಕಿ ತಗುಲಲು ಅವರು ಎಂದಿಗೂ ಅನುಮತಿಸಲಿಲ್ಲ ಮತ್ತು ಯಾರೂ ಅದನ್ನು ಹಾನಿಯನ್ನುಂಟು ಮಾಡಲಿಲ್ಲ. ಇವೆಲ್ಲದರ ನಡುವೆಯೂ ಹಝ್ರತ್ ಪೈಗಂಬರ್(ಸ) ಅವರ ಉನ್ನತ ನೈತಿಕತೆಯ ಪ್ರದರ್ಶನ ಸದಾ ಗೋಚರಿಸುತ್ತದೆ. ಆ ಸಮಯದಲ್ಲಿಯೂ ಸಹ, ಈ ಧ್ವಜವು ಉಹಾದ್‌ನ ಈ ಕಲ್ಲಿನ ನೆಲದ ಮೇಲೆ ತೀವ್ರವಾದ ಗಾಯಗಳಿಂದ ಆವೃತವಾದಾಗ

ಹಝ್ರತ್ ಪೈಗಂಬರ್(ಸ)ವರ ದೇಹವು ಬೀಳುತ್ತಿರುವಾಗ ಸ್ವರ್ಗೀಯ ಎತ್ತರವನ್ನು ಎದುರಿಸುತ್ತಿರುವ ಮಹಾನ್ ವೈಭವದಿಂದ ಹಝ್ರತ್ ಪೈಗಂಬರ್(ಸ) ಅವರ ಪವಿತ್ರ ಕೈಯಲ್ಲಿತ್ತು. ಆ ಸಮಯದಲ್ಲೂ ಈ ಧ್ವಜವು ಹಝ್ರತ್ ಪೈಗಂಬರ್(ಸ) ಅವರ ಕೈಯಲ್ಲಿ ವಿಚಿತ್ರವಾದ ಘನತೆಯಿಂದ ಬೀಸುತ್ತಿತ್ತು, ಆಗ ಸಹಾಬಿಗಳ ದೇಹಗಳು ಸುತ್ತಲೂ ತುಂಡುಗಳಾಗಿ ಬೀಳುತ್ತಿದ್ದವು. ಒಟ್ಟಿನಲ್ಲಿ, ಹಝ್ರತ್ ಪೈಗಂಬರ್(ಸ) ಅವರ ಪ್ರತಿಯೊಂದು ನೈತಿಕ ಜಿಹಾದ್ ಮತ್ತು ಅವರೊಂದಿಗೆ ಇದ್ದ ಆ ಸಹಚರರ ನೈತಿಕತೆಯು ಉಹುದ್ ಯುದ್ಧದ ಜೊತೆಗೆ ಹೆಚ್ಚಿನ ಶಕ್ತಿ ಮತ್ತು ಬಲದಿಂದ ಮುಂದುವರೆಯಿತು ಮತ್ತು ಮಹಾನ್ ವಿಜಯಶಾಲಿಯಾದ ಹಝ್ರತ್ ಪೈಗಂಬರ್(ಸ)ರ ಪ್ರತಿ ನೈತಿಕ ಯುದ್ಧದಲ್ಲಿ ಪ್ರತಿ ಬಾರಿಯೂ ಸೋಲಿಸಲ್ಪಟ್ಟರು. ನೈತಿಕತೆಯ ದೊಡ್ಡ ಮತ್ತು ಬಲವಾದ ಕಟ್ಟಡಗಳನ್ನು ಸಹ ಕೆಡವುವ ಶಕ್ತಿ ಹೊಂದಿರುವ ಈ ಭೀಕರ ಭೂಕಂಪಗಳ ಮಧ್ಯದಿಂದ ಅವರು(ಸ) ಸುರಕ್ಷಿತವಾಗಿ ಹೊರಬಂದರು.

(ಖಿಲಾಫತ್‌ನ ಮೊದಲ ಭಾಷಣಗಳು, ಖುತ್ಬಾತೆ ತಾಹಿರ್, ಪುಟ–331 ರಿಂದ 335)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಉಹುದ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ)ರ ಸತ್ಯತೆಗೆ ಬಹಳ ದೊಡ್ಡದಾದ ಒಂದು ದೃಷ್ಟಾಂತವಿತ್ತು. ಈ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿ ಪ್ರಕಾರ ಮೊದಲು ಮುಸ್ಲಿಮರಿಗೆ ವಿಜಯ ಲಭಿಸಿತು. ಹಝ್ರತ್ ಪೈಗಂಬರ್(ಸ)ರ ಪ್ರಿಯ ದೊಡ್ಡಪ್ಪ ಯುದ್ಧದಲ್ಲಿ ವಧಿಸಲ್ಪಟ್ಟರು. ಅನಂತರ ಆರಂಭದ ದಾಳಿಯಲ್ಲಿ ಸತ್ಯನಿಷೇಧಿಗಳ ಧ್ವಜವಾಹಕ ವಧಿಸಲ್ಪಟ್ಟನು. ಅನಂತರ ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿಯ ಪ್ರಕಾರವೇ ಹಝ್ರತ್ ಪೈಗಂಬರ್(ಸ) ಸ್ವತಃ ಗಾಯಗೊಂಡರು ಮತ್ತು ಅನೇಕ ಸಹಾಬಿಯರು ಶಹೀದ್ ಆದರು. ಅದಲ್ಲದೇ ಮುಸ್ಲಿಮರಿಗೆ ಎಂತಹ ನಿಷ್ಠೆ ಮತ್ತು ಸತ್ಯವಿಶ್ವಾಸ ತೋರಿಸಲು ಸಂದರ್ಭ ಲಭಿಸಿತು ಎಂದರೆ, ಅದರ ಉದಾಹರಣೆ ಚರಿತ್ರೆಯಲ್ಲಿ ಬೇರೆಲ್ಲೂ ಕಾಣಲು ಸಿಗುವುದಿಲ್ಲ.

(ದೀಬಾಚಾ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–253)

ಉಹುದ್ ಯುದ್ಧವು ಒಂದು ದೊಡ್ಡ ವಿಜಯವಾಗಿತ್ತು. ಈ ಯುದ್ಧದ ನಂತರ, ಶಿಕ್ಷಣ ಮತ್ತು ತರಬೇತಿಯ ಕೆಲಸವನ್ನು ಪುನರಾರಂಭಿಸಲು ಹಝ್ರತ್ ಪೈಗಂಬರ್(ಸ) ಹೇಗೆ ಆದೇಶಿಸಿದರು, ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ಈ ಯುದ್ಧದಲ್ಲಿ ಅನೇಕ ಮುಸ್ಲಿಮರು ಕೊಲ್ಲಲ್ಪಟ್ಟರು ಮತ್ತು ಅನೇಕರು ಗಾಯಗೊಂಡರು ಆದರೂ ಉಹುದ್ ಯುದ್ಧವನ್ನು ಸೋಲು ಎಂದು ಕರೆಯಲಾಗುವುದಿಲ್ಲ ... ಇದು ಒಂದು ದೊಡ್ಡ ವಿಜಯವಾಗಿದೆ ಮುಸ್ಲಿಮರು ಖಿಯಾಮತ್ ದಿನದವರೆಗೆ ಅದನ್ನು ನೆನಪಿಟ್ಟುಕೊಳ್ಳುವ ಮೂಲಕ ತಮ್ಮ ವಿಶ್ವಾಸವನ್ನು ಹೆಚ್ಚಿಸಬಹುದು ಮತ್ತು ಮುಂದುವರಿಸಬಹುದು. ಮದೀನಾಗೆ ತಲುಪಿದ ನಂತರ, ಹಝ್ರತ್ ಪೈಗಂಬರ್(ಸ) ಅವರು ಮತ್ತೆ ತಮ್ಮ ಮುಖ್ಯ ಕೆಲಸವನ್ನು ಪ್ರಾರಂಭಿಸಿದರು, ಅಂದರೆ ತರಬೇತಿ ಮತ್ತು ಶಿಕ್ಷಣ ಮತ್ತು ಸ್ವಯಂ ಸುಧಾರಣೆ. ಆದರೆ ನೀವು(ಸ) ಇದನ್ನು ಬಹಳ ಸುಲಭವಾಗಿ ಮತ್ತು ಅನುಕೂಲಕರವಾಗಿ ಮಾಡಲು ಸಾಧ್ಯವಾಗಲಿಲ್ಲ. ಉಹುದ್ ಘಟನೆಯ ನಂತರ, ಯಹೂದಿಗಳಲ್ಲಿ ಇನ್ನೂ ಹೆಚ್ಚಿನ ಧೈರ್ಯವು ಹುಟ್ಟಿತು ಮತ್ತು ಕಪಟಿಗಳು ತಲೆ ಎತ್ತಲು ಪ್ರಾರಂಭಿಸಿದರು ಮತ್ತು ಇಸ್ಲಾಂ ಅನ್ನು ಅಳಿಸಿಹಾಕುವುದು ಮಾನವ ಶಕ್ತಿಯಲ್ಲಿದೆ ಎಂದು ಅವರು ಭಾವಿಸಿದರು. ಆದ್ದರಿಂದ, ಉಹೂದಿಯರು ಹಝ್ರತ್ ಪೈಗಂಬರ್(ಸ) ಅವರಿಗೆ ವಿವಿಧ ರೀತಿಯಲ್ಲಿ ತೊಂದರೆ ಕೊಡಲು ಪ್ರಾರಂಭಿಸಿದರು. ಕೊಳಕು ಕವಿತೆಗಳನ್ನು ಮಾಡುವ ಮೂಲಕ ಅವರಲ್ಲಿ ಹಝ್ರತ್ ಪೈಗಂಬರ್(ಸ)ರ ಮತ್ತು ಅವರ ಕುಟುಂಬವನ್ನು ಮಾನನಷ್ಟಗೊಳಿಸಿದರು. ಒಮ್ಮೆ ಹಝ್ರತ್ ಪೈಗಂಬರ್(ಸ) ಅವರು ವಿವಾದವನ್ನು ನಿರ್ಧರಿಸಲು ಯಹೂದೀಯರ ಕೋಟೆಗೆ ಹೋಗಬೇಕಾಗಿತ್ತು, ಆದ್ದರಿಂದ ಅವರು ಕುಳಿತಿದ್ದ ಸ್ಥಳದಲ್ಲಿ ಒಂದು ದೊಡ್ಡ ಚಪ್ಪಡಿನ್ನು ಮೇಲಿಂದ ಕೆಳಗೆ ಬೀಳಿಸಿ ಹಝ್ರತ್ ಪೈಗಂಬರ್(ಸ) ಅವರನ್ನು ಹುತಾತ್ಮಗೊಳಿಸಬೇಕೆಂದು ಸಂಚು ಹಾಕಿದ್ದರು. ಆದರೆ ದೇವರು ಅವರಿಗೆ ಸಮಯಕ್ಕೆ ತಿಳಿಸಿದನು ಮತ್ತು ಹಝ್ರತ್ ಪೈಗಂಬರ್(ಸ) ಅವರು ಏನನ್ನೂ ಹೇಳದೆ ಅವರನ್ನು ತೊರೆದರು. ತದನಂತರ, ಯಹೂದಿಗಳು ತಮ್ಮ ತಪ್ಪನ್ನು ಒಪ್ಪಿಕೊಂಡರು." (ದೀಬಾಚಾ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಮಪುಟ–20, ಪುಟ–257)

ಉಹುದ್ ಯುದ್ಧದ ನಂತರ ಉಂಟಾದ ಸ್ಥಿತಿಯ ಪ್ರಸ್ತಾಪ ಮತ್ತು ಹಮ್‌ರಾಉಲ್ ಅಸದ್ ಯುದ್ಧದ ಪ್ರಸ್ತಾಪ ಇಲ್ಲಿ ಕೊನೆಗೊಳ್ಳುತ್ತದೆ.

ಲೋಕದ ಸ್ಥಿತಿಗಳು, ಮುಸ್ಲಿಮರ ಅವಸ್ಥೆ ಮತ್ತು ಫೆಲಸ್ತೀನಿನ ಕುರಿತು ದುಆಗಳನ್ನು ಮಾಡಲು ನಾನು ಗಮನ ಸೆಳೆಯುತ್ತಾ ಬಂದಿದ್ದೇನೆ. ಯುದ್ಧವಿರಾಮ ಕೆಲವು ಕಾಲಕ್ಕೆ ಆಗುವುದು ಎಂದು ಕೆಲವು ಪಕ್ಷಗಳು ಭಾವಿಸುತ್ತಿರುವುದಾಗಿ ತೋರುತ್ತಿದೆ. ಆದರೆ ಯುದ್ಧವಿರಾಮ ಉಂಟಾದರೂ ಕೂಡ ಫೆಲಸ್ತೀನಿಯರ ಮೇಲೆ ದೌರ್ಜನ್ಯ ಕೊನೆಗೊಳ್ಳದು ಎಂದು ಸ್ಥಿತಿಗತಿಗಳನ್ನು ನೋಡುವಾಗ ತೋರುತ್ತಿದೆ. ಆದ್ದರಿಂದ ಧಾರಾಳವಾಗಿ ದುಆಗಳನ್ನು ಮಾಡಬೇಕಾಗಿದೆ. ಅಲ್ಲಾಹನ ಕಡೆಗೆ ಬಾಗುವವಂತಾಗಲು ಅಲ್ಲಾಹನು ಫೆಲಸ್ತೀನಿಯರಿಗೂ ಸೌಭಾಗ್ಯ ನೀಡಲಿ.

ಹೇಗಿದ್ದರೂ ಈ ಸ್ಥಿತಿಗಳಲ್ಲಿ ಅಲ್ಲಾಹನು ಆ ಅಹಂಕಾರಿಗಳ ಸೊಕ್ಕನ್ನು ಮುರಿಯಲು ಏರ್ಪಾಡು ಮಾಡಿರುವುದಾಗಿ ತೋರುತ್ತದೆ. ಈ ಕೆಲಸ ಯಾವಾಗ ಪೂರ್ಣವಾಗುವುದು ಎಂದು ಅಲ್ಲಾಹನೇ ಬಲ್ಲನು. ಆದರೆ ಹೇಗಿದ್ದರೂ ಅವರ ಈ ಅಹಂಕಾರ ಮುರಿಯಲು ಆರಂಭವಾಗಿದೆ. ಅವರ ಒಳಗಿನಿಂದಲೇ ಅವರ ಎದುರಾಳಿಗಳು ಉಂಟಾಗಲು ಆರಂಭವಾಗಿದೆ. ಅಮೇರಿಕದಲ್ಲೂ ಪ್ರತಿಭಟನೆಗಳು ನಡೆಯುತ್ತಿವೆ. ಈ ಪ್ರತಿಭಟನೆಗಳನ್ನು ಅಡಗಿಸಲು ಈಗ ಬಲಪ್ರಯೋಗ ನಡೆಯುತ್ತಿದೆ. ಆದರೂ ಈ ಬೆಂಕಿಯ ಕಿಡಿ ಪ್ರಜ್ವಲಿಸುವುದು. ತಾತ್ಕಾಲಿಕವಾಗಿ ನಿಂತರೂ ಕೂಡ ಪುನಃ ಉರಿಯುವುದು. ಅಲ್ಲಾಹನು ಲೋಕದ ದೊಡ್ಡ ದೇಶಗಳಿಗೆ ಬುದ್ಧಿ ನೀಡಲಿ ಮತ್ತು ಅವರು ನ್ಯಾಯದಿಂದ ವರ್ತಿಸುವವಂತಾಗಲಿ. ಅವರಿಗೆ ಸ್ವಂತಕ್ಕಾಗಿ ಒಂದು ನೀತಿ ಮತ್ತು ಇತರರಿಗಾಗಿ ಮತ್ತೊಂದು ನೀತಿ. ಇದೇ ಸಂಗತಿ ಅನಂತರ ಒಂದು ಕಾಲದಲ್ಲಿ ವಿಶ್ವಸಂಸ್ಥೆ ಇಲ್ಲವಾಗಲು ಕಾರಣವಾಗುವುದು.

ಇಂದು ನಾನು ಹೇಳಲು ಬಯಸುವ ಎರಡನೇ ಪ್ರಾರ್ಥನೆ ನನಗಾಗಿ ಆಗಿದೆ. ದೀರ್ಘ ಕಾಲದಿಂದ ನನಗೆ ಹೃದಯದ ವಾಲ್‌ವಿನ (volve) ಸಮಸ್ಯೆ ಇತ್ತು. ವೈದ್ಯರು ಚಿಕಿತ್ಸೆಗಾಗಿ ಹೇಳುತ್ತಿದ್ದರು, ಆದರೆ ನಾನು ಅದನ್ನು ಮುಂದೂಡುತ್ತಿದ್ದೆ. ಇನ್ನು ಕಾಯುವುದು ಸೂಕ್ತವಲ್ಲ ಎನ್ನುವಂತಹ ಹಂತ ಬಂದಿರುವುದರಿಂದ ಅವರ ಕೋರಿಕೆಯ ಮೇರೆಗೆ ಕೆಲವು ದಿನಗಳ ಹಿಂದೆ ವಾಲ್ವ್ (volve) ಬದಲಾಯಿಸುವ ಪ್ರಕ್ರಿಯೆ ನಡೆದಿದೆ. ವೈದ್ಯರ ಸೂಚನೆಯಂತೆ ನನಗೆ ಕೆಲವು ದಿನಗಳ ವರೆಗೆ ಮಸೀದಿಗೆ ಬರಲು ಸಾಧ್ಯವಾಗಿರಲಿಲ್ಲ. ಈಗ ನಾನು ಗುಣಮುಖನಾಗಿದ್ದೇನೆ. ಅಲ್‌ಹಮ್ದುಲಿಲ್ಲಾಹ್. ಅಲ್ಲಾಹನ ಕೃಪೆಯಿಂದ ಈಗ ಆಗಬೇಕಿದ್ದ ವೈದ್ಯಕೀಯ ಚಿಕಿತ್ಸೆ ಯಶಸ್ವಿಯಾಗಿದೆ ಎನ್ನುತ್ತಾರೆ ವೈದ್ಯರು. ಅಲ್ಲಾಹನು ದಯಪಾಲಿಸುವಷ್ಟು ಜೀವನ ಸಕ್ರಿಯ ಜೀವನವಾಗಿರಲಿ ಎಂದು ಪ್ರಾರ್ಥಿಸಿರಿ – ಆಮೀನ್.

(ಅಲ್–ಫಝಲ್ ಇಂಟರ್‌ನ್ಯಾಶನಲ್ ಡೈಲಿ, ಮೇ 24, 2024, ಪುಟ 2–5)

...*...*...*...

**ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಸಾಲಾನ ಇಜ್ತೆಮಾ 2024 ನಡೆಯುವ ದಿನಾಂಕಗಳು**

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತಮಾ) 25, 26 ಮತ್ತು 27ನೇ ಅಕ್ಟೋಬರ್ 2023 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

**ಅಂತಿಮ ವಿಜಯ**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಪ್ರಾಯಶಃ ಕೊನೆಗೆ ಕ್ರೈಸ್ತ ಧರ್ಮ ಲೋಕದಾದ್ಯಂತ ವ್ಯಾಪಿಸುವುದೆಂದು ಅಥವಾ ಬೌದ್ಧ ಧರ್ಮ ಲೋಕವನ್ನೆಲ್ಲ ಆವರಿಸುವುದೆಂದು ಭೂಲೋಕದ ಜನರು ಆಲೋಚಿಸುತ್ತಿರಬಹುದು. ಆದರೆ ಅವರ ಈ ಯೋಚನೆ ತಪ್ಪಾಗಿದೆ. ಆಕಾಶದಲ್ಲಿ ದೇವನಿಂದ ನಿರ್ಧರಿಸಲ್ಪಡುವವರೆಗೆ ಯಾವುದೇ ಕಾರ್ಯವು ಭೂಮಿಯಲ್ಲಿ ಸಂಭವಿಸಲಾರದು. ಅಂತಿಮವಾಗಿ ಇಸ್ಲಾಮ್ ಧರ್ಮ ಜನರ ಹೃದಯಗಳನ್ನು ಜಯಿಸುವುದು ಎಂದು ಆಕಾಶ ಭೂಮಿಗಳ ಅಧಿಪತಿಯಾದ ದೇವನು ನನಗೆ ತಿಳಿಸಿರುವನು.

**(ಬರಾಹೀನೆ ಅಹ್ಮದಿಯಾ, ಭಾಗ 5; ರೂಹಾನೀ ಖಝಾಇನ್ ಸಂಪುಟ 21, ಪುಟ 427)**

ವಾಸ್ತವವಾಗಿ, ನೀವು ಸುಸಂಸ್ಕೃತ ಜನರಾಗಿದ್ದೀರಿ, ನಾಸ್ತಿಕರು ಅಥವಾ ಯಾವುದೇ ಧರ್ಮವನ್ನು ನಂಬದವರಲ್ಲ ನಿವು ಸ್ವತಃ ನಿಮ್ಮನ್ನು ಕೀಳಾಗಿ ಭಾವಿಸುವ ಅಗತ್ಯವಿಲ್ಲ

ನೀವು ನಿಮ್ಮನ್ನು, ನಿಮ್ಮ ಶಿರವನ್ನು, ನಿಮ್ಮ ಗಲ್ಲವನ್ನು ಮತ್ತು ನಿಮ್ಮ ಎದೆಭಾಗವನ್ನು ಮುಚ್ಚಿಕೊಳ್ಳಬೇಕು ಮತ್ತು ಸರಳವಾದ ಬಟ್ಟೆಗಳನ್ನು ಧರಿಸಬೇಕು.
ಇದು ಇಸ್ಲಾಮಿಕ್ ಉಡುಗೆಯಾಗಿದೆ ಎಂದು ಜನರಿಗೆ ತಿಳಿಸಿಕೊಡಿ ಮತ್ತು ಪವಿತ್ರ ಖುರ್‌ಆನ್‌ನಲ್ಲಿ ಮುಸ್ಲಿಂ ಮಹಿಳೆಯರಿಗೆ ಈ ಆದೇಶವನ್ನು ನೀಡಲಾಗಿದೆ, ಆದ್ದರಿಂದ ನಾವು ಈ ಉಡುಪನ್ನು ಧರಿಸುತ್ತೇವೆ ಮತ್ತು ನಾವು ಅಲ್ಲಾಹನ ಆದೇಶವನ್ನು ಅನುಸರಿಸುತ್ತೇವೆ ಎಂದು ಹೇಳಿಕೊಡಿ.
ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಿ ಮತ್ತು ಎಂದಿಗೂ ಆತ್ಮವಿಶ್ವಾಸವನ್ನು ಕಳೆದುಕೊಳ್ಳಬೇಡಿ

ಅಹ್ಮದಿ ಮುಸ್ಲಿಂ ಹುಡುಗಿಯರಲ್ಲಿ ನಮಗೆ ಹೆಚ್ಚು ವೈದ್ಯರು, ಹೆಚ್ಚಿನ ಶಿಕ್ಷಕರು ಬೇಕು ಮತ್ತು ನೀವು ವಿಜ್ಞಾನ ವಿಷಯಗಳಲ್ಲಿ ಉತ್ತಮರಾಗಿದ್ದರೆ, ನಂತರ ವೈದ್ಯಕೀಯ ಅಥವಾ ಶಸ್ತ್ರಚಿಕಿತ್ಸಕರಾಗಿ.

ನೀವು ಯಾವುದೇ ಸಮಸ್ಯೆಯನ್ನು ಎದುರಿಸಿದಾಗ, ನಿಮ್ಮ ಪ್ರಾರ್ಥನೆಯಲ್ಲಿ ಸ್ಥಿರತೆಯೊಂದಿಗೆ ನೀವು ಅಲ್ಲಾಹನನ್ನು ಪ್ರಾರ್ಥಿಸಬೇಕು.

ನಿಮ್ಮೆಲ್ಲರಿಗೂ ನನ್ನ ಸಲಹೆಯೆಂದರೆ ನಿಮ್ಮ ಅಧ್ಯಯನದಲ್ಲಿ ಪ್ರಗತಿ ಸಾಧಿಸಲು ಶ್ರಮಿಸಬೇಕು ಇದರಿಂದ ನೀವು ಸಾಧ್ಯವಾದಷ್ಟು ಕಲಿಯಬಹುದು

## ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್(ಅತಬಿಅ), ಅವರೊಂದಿಗೆ ನೈಜೀರಿಯಾದ ನಾಸಿರಾತುಲ್ ಅಹ್ಮದಿಯಾದ ಆನ್‌ಲೈನ್ ಸಭೆ ಮತ್ತು ಹುಝೂರ್(ಅತಬಿಅ)ರವರ ಅತ್ಯುತ್ತಮ ಸಲಹೆ ಸೂಚನೆಗಳು.

ಸೆಪ್ಟೆಂಬರ್ 25, 2021 ರಂದು, ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್(ಅತಬಿಅ), ಅವರು 9 ರಿಂದ 14ವರ್ಷ ವಯಸ್ಸಿನ ನೈಜೀರಿಯಾದ ನಾಸಿರಾತುಲ್ ಅಹ್ಮದಿಯಾದ ಸದಸ್ಯರನ್ನು ಆನ್‌ಲೈನ್ ಮುಖಾಂತರ ಭೇಟಿಯಾದರು. ಹುಝೂರ್ ಅನ್ವರ್(ಅತಬಿಅ) ಅವರು ಇಸ್ಲಾಮಾಬಾದ್ (ಟಿಲ್ಫೋರ್ಡ್) ನಲ್ಲಿರುವ ಒಖಿಂ ಸ್ಟುಡಿಯೋದಲ್ಲಿ ಪ್ರದರ್ಶನ ನೀಡಿದರು, ನಾಸಿರಾತುಲ್ ಅಹ್ಮದಿಯಾ ಸದಸ್ಯರು ಲಾಗೋಸ್ (ನೈಜೀರಿಯಾ) ನ ಲಜ್ನಾ ಹಾಲ್ ಅಜುಕುರುದಿಂದ ಆನ್‌ಲೈನ್‌ನಲ್ಲಿ ಭಾಗವಹಿಸಿದರು.

ಭೇಟಿಯು ಪವಿತ್ರ ಖುರ್‌ಆನ್‌ನ ಪಠಣದೊಂದಿಗೆ ಪ್ರಾರಂಭವಾಯಿತು. ಭೇಟಿಯಲ್ಲಿ ನಾಸಿರಾತುಲ್–ಅಹ್ಮದಿಯಾ ಸದಸ್ಯರು ತಮ್ಮ ನಂಬಿಕೆಗಳು, ಬೋಧನೆಗಳು ಮತ್ತು ಪ್ರಸ್ತುತ ಯುಗಕ್ಕೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಇತರ ಪ್ರಶ್ನೆಗಳ ಬಗ್ಗೆ ಹುಝೂರ್ ಅನ್ವರ್(ಅತಬಿಅ) ಅವರನ್ನು ಕೇಳುವ ಸೌಭಾಗ್ಯ ಪಡೆದರು.

ಧರ್ಮ ಮತ್ತು ಇಂದಿನ ನಾಗರಿಕತೆಯ ನಡುವೆ ಏನಾದರೂ ವಿರೋಧಾಭಾಸವಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಹುಝೂರ್ ಅನ್ವರ್(ಅತಬಿಅ), ಧರ್ಮವು ನಿಮ್ಮನ್ನು ನಾಗರಿಕತೆಯಿಂದ ದೂರ ಮಾಡುತ್ತದೆ ಎಂದು ಹೇಳುವವರು ತಪ್ಪು ಎಂದು ಹೇಳುತ್ತಾರೆ. ಮತ್ತು ನಾವು ಉತ್ತಮವಾಗಿದ್ದೇವೆ. ವಾಸ್ತವವಾಗಿ, ಧರ್ಮವು ಜಗತ್ತಿಗೆ ನಾಗರಿಕತೆಯನ್ನು ತಂದಿದೆ. ಅಂತಹ ಆಕ್ಷೇಪಾರ್ಹ ಜನರು ಸ್ವತಃ ಯಾವುದೇ ಪ್ರವಾದಿ ಬರದಿದ್ದರೆ, ಜಗತ್ತಿನಲ್ಲಿ ಯಾವುದೇ ನಾಗರಿಕತೆ ಹುಟ್ಟುತ್ತಿರಲಿಲ್ಲ ಎಂದು ನಂಬಿರುತ್ತಾರೆ. ಒಂದು ಕಡೆ ಧರ್ಮವು ನಾಗರಿಕತೆಯನ್ನು ತರುತ್ತದೆ ಎಂದು ಹೇಳುತ್ತಾರೆ ಮತ್ತು ಇನ್ನೊಂದು ಕಡೆ ನೀವು ಧರ್ಮವನ್ನು ಅನುಸರಿಸಬಾರದು ಎಂದು ಹೇಳುತ್ತಾರೆ ಏಕೆಂದರೆ ಅದು ನಿಮ್ಮನ್ನು ಇಂದಿನ ಆಧುನಿಕ ನಾಗರಿಕತೆಯಿಂದ ದೂರವಿಡುತ್ತಿದೆ. ಮತ್ತು ಇಂದಿನ ಆಧುನಿಕ ನಾಗರಿಕತೆಯು ಅನೈತಿಕತೆಯಲ್ಲದೆ ಬೇರೇನೂ ಅಲ್ಲ. ಮತ್ತು ಎಲ್ಲವೂ ಸ್ವಾತಂತ್ರ್ಯದ ಹೆಸರಿನಲ್ಲಿದೆ ಅದು ನಿಮಗೆ ಒಳ್ಳೆಯದನ್ನು ನೀಡುವುದಿಲ್ಲ ಆದರೆ ನಿಮ್ಮ ಜೀವನವನ್ನು ಹಾಳುಮಾಡುತ್ತದೆ. ಹಾಗಾಗಿ ಇಂಥವರಿಗೆ ಭಯಪಡುವ ಅಗತ್ಯವಿಲ್ಲ. ನೀವು ಧರ್ಮವನ್ನು ಆಚರಿಸುವ ಸುಸಂಸ್ಕೃತ ಜನರಾಗಿದ್ದೀರಿ. ಮತ್ತು ಪವಿತ್ರ ಖುರ್‌ಆನ್‌ನ ಬೋಧನೆಗಳನ್ನು ಅನುಸರಿಸುವವರಾಗಿದ್ದೀರಿ. ನಂತರ ಮುಸ್ಲಿಮರಾಗಿ ನೀವು ಪವಿತ್ರ ಖುರ್‌ಆನ್‌ನ ಬೋಧನೆಗಳನ್ನು ಸಹ ಅನುಸರಿಸಬೇಕು. ಮತ್ತು ನೀವು ಅನುಸರಿಸಬೇಕಾದ ಪವಿತ್ರ ಖುರ್‌ಆನ್‌ನಲ್ಲಿ ನಿಮಗೆ ಯಾವ ಆಜ್ಞೆಗಳನ್ನು ನೀಡಲಾಗಿದೆ ಎಂಬುದನ್ನು ನೀವು ಕಂಡುಹಿಡಿಯಬೇಕು. ವಾಸ್ತವವಾಗಿ, ನೀವು ಸುಸಂಸ್ಕೃತ ಜನರಾಗಿದ್ದೀರಿ, ನಾಸ್ತಿಕರು ಅಥವಾ ಯಾವುದೇ ಧರ್ಮವನ್ನು ನಂಬದವರಲ್ಲ. ನೀವು ನಿಮ್ಮನ್ನು ಸ್ವತಃ ಕೀಳಾಗಿ ಭಾವಿಸುವ ಅಗತ್ಯವಿಲ್ಲ.

ಮುಸ್ಲಿಮೇತರರ ಭಯದಿಂದ ಅಥವಾ ಅಪಹಾಸ್ಯಕ್ಕೊಳಗಾಗುವುದರಿಂದ ಟೀಕೆಗಳಿಂದಾಗಿ ಕೆಲವು ಮುಸ್ಲಿಂ ಹುಡುಗಿಯರು ಅಥವಾ ಮಹಿಳೆಯರು ಹಿಜಾಬ್ ಧರಿಸಲು ಹಿಂಜರಿಯುತ್ತಾರೆ ಎಂದು ಹುಡುಗಿಯೊಬ್ಬಳು ಕೇಳಿದಳು. ಅಂತಹ ವಿರೋಧದ ನಡುವೆಯೂ ಇಸ್ಲಾಮಿಕ್ ಬೋಧನೆಗಳನ್ನು ಹೇಗೆ ಅನುಸರಿಸಬಹುದು ಎಂಬುದಕ್ಕೆ ಅವಳು ಹುಝೂರ್ ಅನ್ವರ್(ಅತಬಿಅ) ಅವರಿಂದ ಮಾರ್ಗದರ್ಶನವನ್ನು ಕೋರಿದಳು.

ಹುಝೂರ್ ಅನ್ವರ್(ಅತಬಿಅ) ಅವರು ಇದಕ್ಕೆ ಉತ್ತರಿಸುತ್ತ ಹೇಳಿದರು: ಇದು ಇಸ್ಲಾಮಿಕ್ ಉಡುಗೆಯಾಗಿದೆ ಮತ್ತು ಪವಿತ್ರ ಖುರ್‌ಆನ್‌ನಲ್ಲಿ ಮುಸ್ಲಿಂ ಮಹಿಳೆಯರಿಗೆ ಈ ಆದೇಶ ನೀಡಲಾಗಿದೆ ಎಂದು ಆತ್ಮಸ್ಥೈರ್ಯ ಬೆಳೆಸಿಕೊಳ್ಳಲು ಜನರಿಗೆ ತಿಳಿಸಿಕೊಡಿ. ಸರ್ವಶಕ್ತನಾದ ಅಲ್ಲಾಹನು ಹೇಳುವಂತೆ ಮಹಿಳೆಯರು ತಮ್ಮನ್ನು, ತಮ್ಮ ತಲೆ, ಗಲ್ಲ, ಮತ್ತು ಎದೆಭಾಗವನ್ನು ಮುಚ್ಚಿಕೊಳ್ಳಬೇಕು ಮತ್ತು ಸಡಿಲುವಸ್ತ್ರ ಮತ್ತು ಸರಳವಾದ ಬಟ್ಟೆಗಳನ್ನು ಧರಿಸಬೇಕು. ಅದಕ್ಕಾಗಿಯೇ ನಾವು ಈ ಉಡುಪನ್ನು ಧರಿಸುತ್ತೇವೆ ಮತ್ತು ನಾವು ಸರ್ವಶಕ್ತನಾದ ಅಲ್ಲಾಹನ ಆದೇಶವನ್ನು ಅನುಸರಿಸುತ್ತೇವೆ ಮತ್ತು ಯಾವುದೇ ವ್ಯಕ್ತಿಯ ಭಯವಿಲ್ಲದೆ ನಾವು ಅದನ್ನು ಮುಂದುವರಿಸುತ್ತೇವೆ ಎಂದು ಹೇಳಿ. ಆತ್ಮಸ್ಥೈರ್ಯವನ್ನು ಬೆಳೆಸಿಕೊಳ್ಳಿ ಮತ್ತು ಎಂದಿಗೂ ಆತ್ಮವಿಶ್ವಾಸವನ್ನು ಕಳೆದುಕೊಳ್ಳಲು ಬಿಡಬೇಡಿ. ನೀವು ನಿಮ್ಮನ್ನು ಅಹ್ಮದಿ ಮುಸ್ಲಿಂ ಎಂದು ಕರೆಸಿಕೊಂಡಾಗ, ಇತರರಿಗೆ ಭಯಪಡುವ ಅಗತ್ಯವಿಲ್ಲ.

ಅಹ್ಮದಿಯಾ ಮುಸ್ಲಿಂ ಜಮಾಅತ್‌ನ ಉಪಯುಕ್ತ ಸದಸ್ಯರಾಗಲು ಉನ್ನತ ಶಿಕ್ಷಣದಲ್ಲಿ ಏನು ಓದಬೇಕು ಎಂದು ಹುಝೂರ್ ಅನ್ವರ್(ಅತಬಿಅ) ಅವರನ್ನು ಓರ್ವ ನಾಸಿರಾ ಪ್ರಶ್ನಿಸಿದರು.

ಅದಕ್ಕೆ ಹುಝೂರ್ ಅನ್ವರ್(ಅತಬಿಅ) ಹೇಳಿದರು, ಅಹ್ಮದಿ ಮುಸ್ಲಿಂ ಹೆಣ್ಣುಮಕ್ಕಳಲ್ಲಿ ನಮಗೆ ಹೆಚ್ಚಿನ ವೈದ್ಯರು, ಹೆಚ್ಚಿನ ಶಿಕ್ಷಕರು ಬೇಕು ಮತ್ತು ನೀವು ವಿಜ್ಞಾನ ವಿಷಯಗಳಲ್ಲಿ ಉತ್ತಮರಾಗಿದ್ದರೆ, ವೈದ್ಯಕೀಯ ಅಥವಾ ಶಸ್ತ್ರಚಿಕಿತ್ಸಕರಾಗಿ. ನಮಗೆ ನಮ್ಮ ಶಾಲೆಗಳಿಗೆ ಶಿಕ್ಷಕರು ಮತ್ತು ನಮ್ಮ ಆಸ್ಪತ್ರೆಗಳಿಗೆ ವೈದ್ಯರು ಬೇಕಾಗಿದ್ದಾರೆ. ಅಲ್ಲದೆ, ನಿಮಗೆ ನಿರ್ದಿಷ್ಟ ವಿಷಯದಲ್ಲಿ ಆಸಕ್ತಿ ಇದ್ದರೆ, ನನಗೆ ಬರೆಯಿರಿ ಮತ್ತು ಅದೇ ವಿಷಯವನ್ನು ಅಥವಾ ನಿಮಗೆ ಆಸಕ್ತಿಯಿರುವ ಮತ್ತು ಇಡೀ ಜಮಾಅತ್‌ಗೆ ಉಪಯುಕ್ತವಾದ ಪರ್ಯಾಯ ವಿಷಯವನ್ನು ಅಧ್ಯಯನ ಮಾಡಲು ನಾನು ನಿಮಗೆ ಹೇಳುತ್ತೇನೆ.

ಹುಝೂರ್ ಅನ್ವರ್(ಅತಬಿಅ) ಅವರು ಆಫ್ರಿಕಾದಲ್ಲಿದ್ದಾಗ ದುಆ ಸ್ವೀಕಾರ ಕುರಿತು ಯಾವುದೇ ಘಟನೆಯನ್ನು ಹೇಳಬಹುದೇ ಎಂದು ಇನ್ನೊರ್ವ ನಾಸಿರಾ ಕೇಳಿದರು.

ಇದಕ್ಕೆ ಉತ್ತರಿಸುತ್ತಾ ಹುಝೂರ್ ಅನ್ವರ್(ಅತಬಿಅ) ಹೇಳಿದರು:

ಹಲವಾರು ಘಟನೆಗಳಿವೆ. ಒಮ್ಮೆ ನಮ್ಮ ಬಳಿ ಹಾಲು ಇರಲಿಲ್ಲ ಮತ್ತು ನಮ್ಮ ಮಕ್ಕಳು ಚಿಕ್ಕವರಾಗಿದ್ದರು, ನಾವು ದುಆ ಮಾಡಿದೆವು. ಸರ್ವಶಕ್ತನಾದ ಅಲ್ಲಾಹನು ನಮ್ಮ ಪ್ರಾರ್ಥನೆಯನ್ನು ಸ್ವೀಕರಿಸಿದನು ಮತ್ತು ಸ್ವಲ್ಪ ಸಮಯದ ನಂತರವೇ ಸ್ನೇಹಿತರೊಬ್ಬರು ಖಜಜಚಿಟ ಹಾಲಿನ ಪೆಟ್ಟಿಗೆಯನ್ನು ತಂದುಕೊಟ್ಟರು. ಆ ಸಮಯದಲ್ಲಿ ಖಜಜಚಿಟ ಹಾಲು ಮಾತ್ರ ಸಿಗುತ್ತಿತ್ತು. ಇವತ್ತು ಸಿಗುತ್ತೋ ಇಲ್ಲವೋ ಗೊತ್ತಿಲ್ಲ. ಹೀಗೆ ಒಂದರಿಂದ ಎರಡು ಗಂಟೆಯೊಳಗೆ ನಮ್ಮ ಪ್ರಾರ್ಥನೆಯನ್ನು ಸ್ವೀಕರಿಸಲಾಯಿತು. ನನ್ನ ಮತ್ತು ನನ್ನ ಪತ್ನಿಯ ಪ್ರಾರ್ಥನೆಯನ್ನು ಸ್ವೀಕರಿಸಲಾಗಿದೆ. ಎರಡೆರಡು ದಿನಕ್ಕಷ್ಟೇ ಅಲ್ಲ ಒಂದು ತಿಂಗಳಿಗಾಗುವಷ್ಟು ಹಾಲಿನ ವ್ಯವಸ್ಥೆ ಮಾಡಿದ್ದರಿಂದ ಇಬ್ಬರಿಗೂ ಖುಷಿಯಾಯಿತು. ಈ ರೀತಿಯಾಗಿ ಸರ್ವಶಕ್ತನಾದ ಅಲ್ಲಾಹನು ನಮ್ಮ ಪ್ರಾರ್ಥನೆಯನ್ನು ಕೇಳುತ್ತಾನೆ ಎಂದು ನಾವು ನೋಡಬಹುದು.

ಒಬ್ಬ ಮಹಿಳೆ ಅಥವಾ ಹುಡುಗಿ ಸೈನ್ಯಕ್ಕೆ ಸೇರಬಹುದೇ ಎಂದು ಇನ್ನೊಬ್ಬ ನಾಸಿರಾ ಕೇಳಿದರು. ಈ ಪ್ರಶ್ನೆಗೆ ಉತ್ತರಿಸಿದ ಹುಝೂರ್ ಅನ್ವರ್(ಅತಬಿಅ), ಸದ್ಯಕ್ಕೆ ಅದರ ಅಗತ್ಯವಿಲ್ಲ ಎಂದರು. ಒಂದು ಕಾಲವಿತ್ತು ಅಗತ್ಯವಿದ್ದಾಗ, ಮುಸ್ಲಿಂ ಮಹಿಳೆಯರು ಯುದ್ಧಗಳಲ್ಲಿ ಭಾಗವಹಿಸಿದರು ಮತ್ತು ಅವರ ಪುರುಷರನ್ನು ಬೆಂಬಲಿಸಿದರು. ಆದರೆ ಇಂದಿನ ದಿನಗಳಲ್ಲಿ ನಮ್ಮಲ್ಲಿ ಯುದ್ಧದಲ್ಲಿ ಹೋರಾಡುವ ಸಾಕಷ್ಟು ಪುರುಷರು ಇದ್ದಾರೆ, ನಂತರ ಸೈನ್ಯದ ಹುಡುಗಿಯರಿಗೆ ವಾತಾವರಣವೂ ಅನುಕೂಲಕರವಾಗಿಲ್ಲ, ಆದ್ದರಿಂದ ನಾನು ಅಹ್ಮದಿ ಹುಡುಗಿಯರನ್ನು ಸೈನ್ಯಕ್ಕೆ ಸೇರಲು ಅಥವಾ ಸೈನಿಕರಾಗಲು ಅನುಮತಿಸುವುದಿಲ್ಲ ಮತ್ತು ನೀವು ವೈದ್ಯಕೀಯ ವಿಜ್ಞಾನವನ್ನು ಅಧ್ಯಯನ ಮಾಡಿದರೆ ನೀವು ಪೂರ್ಣಗೊಳಿಸಿದರೆ ಅಥವಾ ಆಗಿದ್ದರೆ ವೈದ್ಯರೇ, ನಂತರ ನೀವು ಸೇನಾ ವೈದ್ಯಕೀಯ ದಳಕ್ಕೆ ಸೇರಬಹುದು ಮತ್ತು ಅನುಮತಿಸಬಹುದು. ಆದರೆ ಯುದ್ಧಭೂಮಿಯಲ್ಲಿ ಹೋರಾಡಿದ ಸೈನಿಕರಂತೆ ಅಲ್ಲ.

ಜಗತ್ತಿನಾದ್ಯಂತ ಅಹ್ಮದೀಯರನ್ನು ಇಮಾಮತ್ ಮಾಡುವ ಹೊರೆಯನ್ನು ನೀವು ಹೇಗೆ ಹೊತ್ತಿದ್ದೀರಿ? ಎಂದು ಇನ್ನೊಬ್ಬ ನಾಸಿರಾ ಕೇಳಿದರು. ಅಹ್ಮದಿಯರು ಪ್ರಾರ್ಥನೆಗಾಗಿ ನನಗೆ ಪತ್ರಗಳನ್ನು ಬರೆಯುತ್ತಾರೆ ಮತ್ತು ನಾನು ಅವರಿಗಾಗಿ ಪ್ರಾರ್ಥಿಸುತ್ತೇನೆ ಎಂದು ಹುಝೂರ್ ಅನ್ವರ್(ಅತಬಿಅ) ಹೇಳಿದರು. ಅವರ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಅವರಿಗೆ ಸಹಾಯ ಮಾಡಲು ನಾನು ಅಲ್ಲಾಹನ ಸಹಾಯವನ್ನು ಕೋರುತ್ತೇನೆ. ಮತ್ತು ನಾನು ಯಾವುದೇ ಒತ್ತಡವನ್ನು ಎದುರಿಸಿದಾಗ, ನಾನು ಅಲ್ಲಾಹನಲ್ಲಿ ಪ್ರಾರ್ಥಿಸುತ್ತೇನೆ. ನಾನು ಅವನ ಮುಂದೆ ಬಾಗುತ್ತೇನೆ. ತದನಂತರ ಅಲ್ಲಾಹನು ನನ್ನ ಮನಸ್ಸಿಗೆ ತೃಪ್ತಿಯನ್ನು ನೀಡುತ್ತಾನೆ ಮತ್ತು ಆ ಒತ್ತಡವು ದೂರವಾಗುತ್ತದೆ. ನೀವು ಯಾವುದೇ ಸಮಸ್ಯೆಯನ್ನು ಎದುರಿಸಿದಾಗ, ನಿಮ್ಮ ಪ್ರಾರ್ಥನೆಯಲ್ಲಿ ಸ್ಥಿರತೆಯೊಂದಿಗೆ ನೀವು ಅಲ್ಲಾಹನನ್ನು ಪ್ರಾರ್ಥಿಸಬೇಕು.

ಮನೆಯಲ್ಲಿ ಪೋಷಕರು ಆಗಾಗ್ಗೆ ಜಗಳವಾಡುತ್ತಿದ್ದರೆ, ಅಂತಹ ಸಂದರ್ಭಗಳಲ್ಲಿ ಮಕ್ಕಳು ಏನು ಮಾಡಬೇಕು ಎಂದು ಹುಡುಗಿಯೊಬ್ಬಳು ಕೇಳಿದಳು. ಹುಝೂರ್ ಅನ್ವರ್(ಅತಬಿಅ) ಅದಕ್ಕೆ ಉತ್ತರ ನಿಡುತ್ತ ಹೇಳಿದರು: ಮಕ್ಕಳ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರುವ ಕಾರಣ ತಮ್ಮ ತಮ್ಮೊಳಗೆ ಜಗಳವಾಡದಂತೆ ಸರ್ವಶಕ್ತನಾದ ಅಲ್ಲಾಹನು ಅವರಿಗೆ ತಿಳುವಳಿಕೆ ನೀಡಲಿ ಎಂದು ನೀವು ಮೊದಲು ಪ್ರಾರ್ಥಿಸಬೇಕು. ಮತ್ತು ಮಕ್ಕಳ ಮೇಲೆಯೂ ಅದರ ಪರಿಣಾಮ ಬೀರುತ್ತದೆ. ನಂತರ ಎರಡನೆಯದಾಗಿ ನೀವು ಯಾರೊಂದಿಗೆ ಉತ್ತಮ ಸಂಬಂಧ ಹೊಂದಿದ್ದೀರೊ ಎಂದು ನಿಮ್ಮ ತಾಯಿ ಅಥವಾ ತಂದೆಗೆ ತಿಳಿ ಹೇಳಬೇಕು, ನೀವು ಹಾಗೆ ಜಗಳವಾಡಬಾರದು. ಇದು ಇಸ್ಲಾಮಿಕ್ ಬೋಧನೆಗಳಿಗೆ ವಿರುದ್ಧವಾಗಿದೆ. ಇದು ಅಲ್ಲಾಹ್ ಮತ್ತು ರಸೂಲುಲ್ಲಾಹ್(ಸ) ಅವರ ಬೋಧನೆಗಳಿಗೆ ವಿರುದ್ಧವಾಗಿದೆ. ಒಂದೇ ವಿಷಯವೆಂದರೆ ನಿಮ್ಮ ಬಳಿ ಶಕ್ತಿ ಇಲ್ಲದಿದ್ದರೆ, ನೀವು ಅವರಿಗಾಗಿ ಪ್ರಾರ್ಥಿಸಬೇಕು. ಮತ್ತು ನೀವು ಅವರನ್ನು ತಡೆಯುವ ಶಕ್ತಿಯನ್ನು ಹೊಂದಿದ್ದರೆ, ನೀವು ಇನ್ನೂ ಅವರಿಗಾಗಿ ಪ್ರಾರ್ಥಿಸಬೇಕು. ಮತ್ತು ಎರಡನೆಯದು, ಇದು (ಜಗಳ) ನಮ್ಮ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ ಎಂದು ಅವರಿಗೆ ಮೃದುವಾಗಿ ಮತ್ತು ಗೌರವದಿಂದ ಸಲಹೆ ನೀಡುವುದು. ಆದ್ದರಿಂದ ನೀವು ನಮ್ಮ ಮುಂದೆ ಜಗಳವಾಡಬಾರದು ಮತ್ತು ಕೆಲವು ಸಣ್ಣ ವಿಷಯಗಳು ಮತ್ತು ದೌರ್ಬಲ್ಯಗಳಿದ್ದು ಅವರು ಪರಸ್ಪರ ನಿರ್ಲಕ್ಷಿಸಬೇಕು.

ಈ ಭೇಟಿಯ ಕೊನೆಯಲ್ಲಿ, ಹುಝೂರ್ ಅನ್ವರ್(ಅತಬಿಅ) ಅವರು ತಮ್ಮ ಶಿಕ್ಷಣದ ಬಗ್ಗೆ ನಾಸಿರತ್ ಅವರಿಗೆ ಸಲಹೆ ನೀಡಿದರು ಮತ್ತು ನಿಮ್ಮೆಲ್ಲರಿಗೂ ನನ್ನ ಸಲಹೆಯು ನಿಮ್ಮ ಅಧ್ಯಯನದಲ್ಲಿ ಮುನ್ನಡೆಯಲು ಶ್ರಮಿಸಿ ಇದರಿಂದ ನೀವು ಹೆಚ್ಚಿನ ಶಿಕ್ಷಣವನ್ನು ಪಡೆಯಬಹುದು ಎಂದು ಹೇಳಿದರು. ಮತ್ತು ನೀವು ವೈದ್ಯಕೀಯದಲ್ಲಿ ಆಸಕ್ತಿ ಹೊಂದಿದ್ದರೆ ನಿಮ್ಮ ಶಿಕ್ಷಣವನ್ನು ಪೂರ್ಣಗೊಳಿಸಿ ನಂತರ ನೀವು ವೈದ್ಯಕೀಯ, ಎಂಜಿನಿಯರಿಂಗ್, ಕಾನೂನು, ಶಿಕ್ಷಣಕ್ಕೆ ಹೋಗಬಹುದು ಅಥವಾ ನೀವು ಸಂಶೋಧನೆಗೆ ಹೋಗಲು ಬಯಸಿದರೆ ಸಂಶೋಧನೆಗೆ ಹೋಗಬಹುದು. ನಿಮ್ಮ ಅಧ್ಯಯನದಲ್ಲಿ ಮುನ್ನಡೆಯಲು ನೀವು ಕಷ್ಟಪಟ್ಟು ಪ್ರಯತ್ನಿಸಬೇಕು. ಮತ್ತು ಸಾಧ್ಯವಾದಷ್ಟು ಶಿಕ್ಷಣ ಪಡೆಯಲು ಪ್ರಯತ್ನಿಸಬೇಕು.

ಹಾಗಾದರೆ ಸರಿ ಎಂದು ಭೇಟಿಯ ಕೊನೆಯಲ್ಲಿ ಹುಝೂರ್ ಅನ್ವರ್(ಅತಬಿಅ) ಹೇಳಿದರು. ಸಮಯ ಮುಗಿತು. ಅಲ್ಲಾಹ್ ಹಾಫೀಝ್ ಮತ್ತು ನಾಸಿರ್ ಆಗಲಿ– ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹಿ ವ ಬರಕಾತಹು. **(ಅಖ್ಬರ್ ಅಲ್–ಫಝ್ಲ್ ಇಂಟರ್ನ್ಯಾಷನಲ್ 12 ಅಕ್ಟೋಬರ್ 2021 ಗೆ ಧನ್ಯವಾದಗಳು)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಕೆಲ ಜನರು ಪರದೆ ಎಂದೆ ಅದರಲ್ಲಿ ನಬಿವರ್ಯರು(ಸ) ಅಡಗಿಕೊಳ್ಳುತ್ತಿದ್ದರು ಎಂದು ಭಾವಿಸುತ್ತಾರೆ, ಅವರು ಅಬುಲಹಬನ ಪತ್ನಿಯ ಕಥೆಯನ್ನು ಬರೆದಿದ್ದಾರೆ, ಸೂರ: ಲಹಬ್ ಅವತರಿಸಿದಾಗ, **ಫೀಜೀದಿಹಾ ಹಬ್‌ಲುಮ್ ಮಿಮ್ಮಸದ್**, ಅವತಾರ ತಡೆದು ಅವಳು ಕೋಪಗೊಂಡು ನಬಿ(ಸ) ಅವರಿಗೆ ಸಂಕಷ್ಟಕ್ಕೆ ಒಳಪಡಿಸಲು ಮುಂದಾದಳು. ನಬಿ ಕರೀಂ(ಸ) ಪ್ರಾರ್ಥಿಸಿದರು. ಓ ದೇವಾ ಆಕೆಯ ದುಷ್ಟತನದಿಂದ ನನ್ನನ್ನು ರಕ್ಷಿಸು. ಆಗ ಅಲ್ಲಾಹನು ಅವರ ಮುಂದೆ ಒಂದು ಪರದೆಯನ್ನು ಅಳವಡಿಸಿದನು. ಅದರಿಂದ ಅವಳಿಗೆ ಕಾಣಲಾಗಲಿಲ್ಲ. ಇದೆಲ್ಲ ಕಪೋಲಕಲ್ಪಿತ ಮಾತ್ರವಾಗಿದೆ. ಇಡೀ ಲೋಕಕ್ಕೆ ಹೆದರದ ಆ ಅಲ್ಲಾಹನ ಪ್ರವಾದಿ(ಸ) ಓರ್ವ ದುರ್ಬಲ ಹೆಣ್ಣಿಗೆ ಹೆದರಲು ಸಾಧ್ಯವೇ? ಅವಳಿಂದ ಏಷ್ಟೊಂದು ಹೆದರಿದರೆಂದರೆ ಅಲ್ಲಾಹನು ಅವಳನ್ನು ಮಾಯವಾಗಿಸಬೇಕಾಯಿತು. ಈ ಅಸಾಧಾರಣ ಮಾತನ್ನು ಯಾವ ವಿವೇಕನು ನಂಬಲು ಸಾಧ್ಯವಿಲ್ಲ. ಈ ವರದಿ ಪ್ರಸ್ತುತಪಡಿಸುವವರು, ಇಷ್ಟು ಯೋಚಿಸುವುದಿಲ್ಲ. ಅಲ್ಲಾಹನು ಆ ಪರದೆಯನ್ನು "ಮಸ್ತೂರ್" ಎಂದು ಕರೆದಿದ್ದಾನೆ, ಎಂದರೆ ಅದು ಕಣ್ಣಿಗೆ ಗೋಚರಿಸಲಾಗದಂತಹ ಪರದೆಯಾಗಿದೆ. ಆದರೆ ಈ ಜನರು ನಬಿ ಕರೀಂ(ಸ) ರನ್ನು ಮಸ್ತೂರ್ ಎಂದು ಭಾವಿಸುತ್ತಾರೆ.

(2) ಇದರ ಎರಡನೆ ಅರ್ಥ ಏನಾಗಬಹುದೆಂದರೆ, ಆ ಪರದೆಯ ಮುಂದೆ ಮತ್ತು ಹಿಂದೆ ಒಂದು ಪರದೆ ಇರುತ್ತದೆ, ಎಂದರೆ ಒಂದು ಪರದೆ ನಿನ್ನ ಮತ್ತು ಅವರ ನಡುವೆ ಇರುವುದಿಲ್ಲ. ಬದಲು ಹಲವು ಪರದೆಗಳು ಮಧ್ಯದಲ್ಲಿರುತ್ತವೆ. ಒಂದು ಪರದೆ ಸಮುದಾಯದ ಹೆಮ್ಮೆಯ ಕುರಿತಾಗಿದ್ದರೆ, ಒಂದು ಸಂಪತ್ತಿನ ಪರದೆ, ಒಂದು ನೀತಿಯ ಪರದೆ ಇತ್ಯಾದಿ, ಇತ್ಯಾದಿ, ಎಂದರೆ ಕೆಲವೊಮ್ಮೆ ಜನರು ಈ ಪ್ರವಾದಿಯನ್ನು ನಂಬಿದರೆ ಸಮುದಾಯದವರನ್ನು ಬಿಡಬೇಕಾಗುತ್ತದೆ, ಒಮ್ಮೆ ಸಂಪತ್ತು ಕಳೆದುಕೊಳ್ಳುವ ಭೂಮಿ ಮುಂದಾಗುತ್ತದೆ, ಒಮ್ಮೆ ಹಲವು ರೀತಿಯ ದುಶ್ಚಟಗಳ ಪರದೆ ಮುಂದಾಗುತ್ತವೆ, ವಿಶ್ವಾಸ ತಂದರೆ ಇದನ್ನು ಬಿಡಬೇಕಾಗುತ್ತದೆ. ಆದುದರಿಂದ ಈ ವಚನದಲ್ಲಿ ಹೇಳಲಾಗಿದೆ, ಎಲ್ಲಿಯವರೆಗೆ ಈ ಜನರು ಈ ಪರದೆಗಳನ್ನು ದೂರ ಸರಿಸುವುದಿಲ್ಲ, ನಿನ್ನ ಕಡೆ ವಾಲಲಾರರು, ಆದರೆ ಆಪತ್ತಿನ ವಿಷಯವೇನೆಂದರೆ ಆ ಪರದೆಗಳು ಇವರಿಗೆ ಗೋಚರಿಸದು. ಅವರ ದೃಷ್ಟಿಯಿಂದ ದೂರವಾಗಿವೆ. ಅವರು ಪವಿತ್ರ ಖುರ್‌ಆನ್‌ನ್ನೇ ಕೆಟ್ಟ ವಸ್ತು ಎಂದು ಭಾವಿಸಿಕೊಂಡಿದ್ದಾರೆ, ಅದು ಒಳ್ಳೆಯದಾಗಿರುತ್ತಿದ್ದರೆ ನಮ್ಮ ಹೃದಯಗಳ ಮೇಲೆ ಅದರ ಪ್ರಭಾವವಾಗುತ್ತಿತ್ತು, ಎಂದರೆ ಅವರ ಹೃದಯಗಳ ಮೇಲೆ ಎಂತಹ ತುಕ್ಕು ಹಿಡಿದಿವೆ ಎಂದರೆ ಅವರು ಒಂದು ಒಳ್ಳೆಯ ವಸ್ತುವನ್ನು ಸಹ ಕೆಟ್ಟದ್ದಾಗಿ ಕಾಣುತ್ತಾರೆ. ಆದುದರಿಂದ ಅವರಿಗೆ ವಿಶ್ವಾಸ ತರುವುದು ಕಷ್ಟದಾಯಕವಾಗುತ್ತದೆ. ಈ ಅರ್ಥವನ್ನು ಮುಂದಿನ ವಚನ **ವಜಅಲ್‌ನ ಅಲಾ ಖುಲೂಬಿಹಿಮ್ ಅಕಿನ್ನತನ್** ದೃಢೀಕರಿಸುತ್ತದೆ. ಅವರ ಹೃದಯಗಳ ಮೇಲೆ ಒಂದು ಪರದೆ ಅಲ್ಲ, ಬದಲು ಹಲವು ಪರದೆಗಳು ಬಿದ್ದಿವೆ.

**(ತಫ್ಸೀರ್ ಕಬೀರ್, ಸಂಪುಟ–4, ಪುಟ–344, ಮುದ್ರಣ 2010 ಖಾದಿಯಾನ್)**

## ದಿವ್ಯದೂತರು (ಮಲಾಯಿಕ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ." ***(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 12)***

ಜಲ್ಸ ಸಾಲಾನ ಖಾದಿಯಾನ್ 2022ರ ಭಾಷಣ

# ಅಲ್ಲಾಹನಲ್ಲಿ ನಂಬಿಕೆ ಮತ್ತು ದುಆವಿನ ಸ್ವೀಕಾರದ ಬೆಳಕಿನಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಜೀವನಚರಿತ್ರೆ

(ಮಾನ್ಯ ಮುನೀರ್ ಅಹ್ಮದ್ ಖಾದಿಮ್ ಸಾಹಿಬ್, ಎಡಿಶ್ನಲ್ ನಾಝಿರ್ ಇಸ್ಲಾಹ್ ವ ಇರ್ಷಾದ್ ಜುನೂಬಿ ಹಿಂದ್)

ಸಭೆಯ ಗೌರವಾನ್ವಿತ ಅಧ್ಯಕ್ಷರೇ ಮತ್ತು ಗೌರವಾನ್ವಿತ ಸಭಿಕರೇ, ನೀವು ಕೇಳಿದಂತೆ, ಇಂದು ನನ್ನ ಭಾಷಣದ ಶೀರ್ಷಿಕೆ "ಅಲ್ಲಾಹನಲ್ಲಿ ನಂಬಿಕೆ ಮತ್ತು ದುಆವಿನ ಸ್ವೀಕಾರದ ಬೆಳಕಿನಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಜೀವನಚರಿತ್ರೆ" ಎಂದಾಗಿದೆ. ಅಲ್ಲಾಹನಲ್ಲಿ ನಂಬಿಕೆ ಇಡುವುದು ಮತ್ತು ನಂಬುವುದು ಮತ್ತು ಪ್ರಾರ್ಥನೆಗಾಗಿ ಅವನ ಮುಂದೆ ತಲೆಬಾಗುವುದು ವಾಸ್ತವವಾಗಿ ಎರಡೂ ಬೇರ್ಪಡಿಸಲಾಗದ ಗುಣಲಕ್ಷಣಗಳಾಗಿವೆ. ಅಲ್ಲಾಹನ ಮೇಲೆ ಭರವಸೆ ಇರಿಸುವವನು ಪ್ರಪಂಚದ ಇತರ ಭರವಸೆಗಳನ್ನು ಮತ್ತು ಪ್ರದೇಶಗಳೊಂದಿಗೆ ತನ್ನ ಸಂಬಂಧವನ್ನು ಮುರಿಯುತ್ತಾನೆ ಮತ್ತು (ಮುತಬತ್ತಿಲ್) ವೈರಾಗಿ ಎಂದು ಕರೆಸಿಕೊಳ್ಳುತ್ತಾನೆ. ಮತ್ತು ಅವನ ಕೈಗಳು ಅಲ್ಲಾಹನ ಮುಂದೆ ಮಾತ್ರ ಎತ್ತುತ್ತಾನೆ. ಆದ್ದರಿಂದ, ಪವಿತ್ರ ಖುರ್‌ಆನ್‌ನಲ್ಲಿ, ಅಂತಹ ವಿಶ್ವಾಸಿಗಳನ್ನು ಮತ್ತು ಅವರ ಪ್ರಾರ್ಥನೆಗಳನ್ನು ಉಲ್ಲೇಖಿಸುವಾಗ, ಸರ್ವಶಕ್ತನಾದ ಅಲ್ಲಾಹನು ಅವರು ತಮ್ಮ ಶತ್ರುಗಳ ಪ್ರಲೋಭನೆಗಳಿಂದ ಸುರಕ್ಷಿತವಾಗಿರಲು ಅಲ್ಲಾಹನನ್ನು ಮಾತ್ರ ನೊಂಬುತ್ತಾರೆ ಮತ್ತು ಅವನಲ್ಲಿ ಹೀಗೆ ಪ್ರಾರ್ಥಿಸುತ್ತಾರೆ,

**ರಬ್ಬನಾ ಅಲಯಕ ತವಕ್ಕಲ್‌ನಾ ವ ಇಲೈಕ ಅನಬ್‌ನಾ ವ ಇಲೈಕಲ್ ಮಸೀರ್** (ಸೂರತುಲ್ ಮುಮ್ತಹಿನ: 05) ಅಂದರೆ ಓ ನಮ್ಮ ಪ್ರಭೂ, ನಾವು ನಿನ್ನ ಮೇಲೆ ಭರವಸೆ ಹೊಂದಿದ್ದೇವೆ ನಿನ್ನ ಬಳಿಗೆಯೇ ನಾವು ಮರಳುತ್ತೇವೆ. (ಕೊನೆಯ) ಮರಳಿಕೆ ನಿನ್ನ ಬಳಿಗೆಯೇ ಆಗಿದೆ.

**ವಸಿಅ ರಬ್ಬುನಾ ಕುಲ್ಲ ಶೈಯಿನ್ ಇಲ್ಮನ್ ಅಲಲ್ಲಾಹಿ ತವಕ್ಕಲ್‌ನಾ** (ಸೂರತುಲ್ ಅಅ್‌ರಾಫ್: 90) ನಮ್ಮ ಪ್ರಭು ಎಲ್ಲ ವಿಚಾರಗಳಿಗೆ ಸಂಬಂಧಿಸಿ ಅಗಾಧ ಜ್ಞಾನವುಳ್ಳವನಾಗಿದ್ದಾನೆ. ಅಲ್ಲಾಹನ ಮೇಲೆ ನಾವು ಭರವಸೆ ಇಟ್ಟಿದ್ದೇವೆ.

ನಾನು ನನ್ನ ಭಾಷಣವನ್ನು ರಸೂಲುಲ್ಲಾಹ್ (ಸಲದಲಲದಲಾಹು ಅಲೈಹಿ ವ ಸಲ್ಲಮ್) ಅವರ ಒಂದು ದುಆದೊಂದಿಗೆ ಪ್ರಾರಂಭಿಸುತ್ತಾನೆ. ಇದು ರಸೂಲುಲ್ಲಾಹ್(ಸ) ಅವರು ಎಷ್ಟು ಪ್ರಾರ್ಥನಾಶೀಲರಾಗಿದ್ದರು ಮತ್ತು ನಂಬಿಗಸ್ತ ವ್ಯಕ್ತಿಯಾಗಿದ್ದರು ಎಂಬುದನ್ನು ತೋರಿಸುತ್ತದೆ. ಹೇಳುತ್ತಾರೆ:

ಹಝ್ರತ್ ಇಬ್ನ್ ಅಬ್ಬಾಸ್(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ಹೀಗೆ ದುಆ ಮಾಡುತ್ತಿದ್ದರು:

ಓ ಅಲ್ಲಾಹನೇ! ನಾನು ನಿನಗೆ ವಿಧೇಯನಾಗಿರುತ್ತೇನೆ, ನಿನ್ನ ಮೇಲೆ ವಿಶ್ವಾಸ ತರುತ್ತೇನೆ, ನಿನ್ನನ್ನು ನಂಬುತ್ತೇನೆ, ನಿನ್ನ ಕಡೆಯೇ ಬಾಗುತ್ತೇನೆ, ನಿನ್ನ ಸಹಾಯದಿಂದಲೇ ನಾನು ಶತ್ರುಗಳೊಂದಿಗೆ ಹೋರಾಡುತ್ತೇನೆ. ಓ ನನ್ನ ಅಲ್ಲಾಹನೇ!! ನಾನು ನಿನ್ನ ಗೌರವದ ಆಶ್ರಯವನ್ನು ಯಾಚಿಸುತ್ತೇನೆ, ನಿನ್ನ ಹೊರತು ಬೇರೆ ದೇವರಿಲ್ಲ, ನೀನು ನನ್ನನ್ನು ದಾರಿತಪ್ಪುವಿಕೆಯಿಂದ ರಕ್ಷಿಸಿಕೊ, ನೀವು ಜೀವಂತವಾಗಿದ್ದೀಯ ನಿನ್ನನ್ನು ಹೊರತುಪಡಿಸಿ ಯಾರಿಗೂ ಉಳಿಗಾಲವಿಲ್ಲ, ಜಿನ್ನ್ ಮತ್ತು ಇನ್ಸ್‌ಗಳು ಎಲ್ಲರು ನಶಿಸುವುದು ನಿಶ್ಚಯವಾಗಿದೆ. (ಮುಸ್ಲಿಂ ಕಿತಾಬ್ ಅಲ್-ಝಿಕ್ರ್, ಖುತ್ಬಾತೆ ಮಸ್ರೂರ್, ಸಂಪುಟ-3, ಪುಟ-224)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತವಕ್ಕುಲ್ ಮತ್ತು ದುಆದ ವಿಷಯವನ್ನು ಉಲ್ಲೇಖಿಸಿ ಹೇಳುತ್ತಾರೆ:

"ಯಾರು (ಉತಬತ್ತಿಲ್) ವೈರಾಗಿಯಾಗಿರುತ್ತಾನೋ (ಲೌಕಿಕತೆಯನ್ನು ಬಿಟ್ಟು ದೇವನಲ್ಲಿ ತಲ್ಲೀನನಾಗುವವನು) ಅವನೇ ಅಲ್ಲಾಹನ ಮೇಳೆ ಭರವಸೆ ಹೊಂದಿದವನಾಗುತ್ತಾನೆ. ವಿಶ್ವಾಸಾರ್ಹನಾಗಿರುವುದಕ್ಕೆ ಮುತಬತ್ತಿಲ್ ವೈರಾಗಿಯಾಗಿರುವುದು ಒಂದು ಷರತ್ತು ಆಗಿದೆ. ಏಕೆಂದರೆ ಇತರರೊಂದಿಗಿನ ಸಂಬಂಧವು ಎಲ್ಲಿಯವರೆಗೆ ಅವನು ನಂಬುತ್ತಾನೆ ಮತ್ತು ಅವಲಂಬಿಸುತ್ತಾನೊ. ಅಲ್ಲಿಯ ವರೆಗೆ ಅಲ್ಲಾಹನ ಮೇಲೆ ಅಪ್ಪಟ ವಿಶ್ವಾಸವು ಹೇಗೆ ಹುಟ್ಟುತ್ತದೆ. ಅವನು ತನ್ನನ್ನು ಅಲ್ಲಾಹನಿಂದ ಬೇರ್ಪಡಿಸಿದರೆ, ಅವನು ಪ್ರಪಂಚದಿಂದ ಬೇರ್ಪಟ್ಟಾಗ ಮತ್ತು ತನ್ನನ್ನು ತಾನು ಅಲ್ಲಾಹನಲ್ಲಿ ತಲ್ಲೀನಗೊಂಡಾಗ, ಮತ್ತು ಪರಿಪೂರ್ಣ ವಿಶ್ವಾಸಾರ್ಹನಾದಾಗ ಸಂಭವಿಸುತ್ತದೆ, ನಮ್ಮ ಪ್ರವಾದಿ ಮುಹಮ್ಮದ್(ಸ) ಪರಿಪೂರ್ಣ ವೈರಾಗಿಯಾಗಿದ್ದರು. ಅಂತೆಯೇ, ಅವರು ಪರಿಪೂರ್ಣ ವಿಶ್ವಾಸಾರ್ಹರಾಗಿದ್ದರು ಮತ್ತು ಇದೇ ಕಾರಣದಿಂದ ಇಷ್ಟು ಪ್ರಸಿದ್ಧಿ ಹೊಂದಿರುವವರ ಮತ್ತು ಕುಲ ಗೋತ್ರಗಳನ್ನು ಹೊಂದಿರುವವರ ಸರದಾರಗಳನ್ನು ಪರಿಗಣಿಸಲಿಲ್ಲ ಮತ್ತು ಅವರ ವಿರೋಧದಿಂದ ಕಿಂಚಿತ್ತೂ ಪ್ರಭಾವಿತರಾಗಲಿಲ್ಲ. ರಸೂಲುಲ್ಲಾಹ್(ಸ) ಅವರಲ್ಲಿ ಅಸಾಧಾರಣ ನಂಬಿಕೆಯು ಸರ್ವಶಕ್ತನಾದ ಅಲ್ಲಾಹನಲ್ಲಿ ಇತ್ತು. ಅದಕ್ಕಾಗಿಯೇ ಈ ಬೃಹತ್ತಾದ ವಜೆಯನ್ನು ರಸೂಲುಲ್ಲಾಹ್(ಸ)ರವರು ಎತ್ತಿಹಿಡಿದರು ಮತ್ತು ಇಡೀ ಜಗತ್ತನ್ನು ವಿರೋಧಿಸಿದರು ಮತ್ತು ಅವರಲ್ಲಿ ಯಾರನ್ನೂ ಪರಿಗಣಿಸಲಿಲ್ಲ. ಇದು ವಿಶ್ವಾಸದ ಒಂದು ದೊಡ್ಡ ಉದಾಹರಣೆಯಾಗಿದೆ ಪ್ರಪಂಚದಲ್ಲಿ ಕಾಣಸಿಗುವುದಿಲ್ಲ. ಆದ್ದರಿಂದ ಇದರಲ್ಲಿ ಅಲ್ಲಾಹನನ್ನು ಇಷ್ಟಪಟ್ಟು ಜಗತ್ತನ್ನು ಶತ್ರುವಾಗಿಸಿಕೊಳ್ಳುತ್ತದೆ. ಆದರೆ ದೇವನನ್ನು ನೋಡುವವರೆಗೂ ಈ ಸ್ಥಿತಿಯು ಉದ್ಭವಿಸುವುದಿಲ್ಲ. ಆ ನಂತರ ಇನ್ನೊಂದು ಬಾಗಿಲು ಖಂಡಿತವಾಗಿ ತೆರೆಯುತ್ತದೆ ಎಂಬ ಆಕಾಂಕ್ಷೆ ಹೊಂದಿರಬೇಕು. ಯಾವಾಗ ಈ ಆಕಾಂಕ್ಷೆ ಮತ್ತು ನಂಬಿಕೆಯ ನಂತರ ಅವನು ತನ್ನ ಪ್ರೀತಿಪಾತ್ರರನ್ನು ದೇವರ ಮಾರ್ಗದಲ್ಲಿ ಶತ್ರುಗಳಾಗಿ ಪರಿವರ್ತಿಸುತ್ತಾನೆ, ಏಕೆಂದರೆ ದೇವರು ಅವನನ್ನು ಸ್ನೇಹಿತನಾಗುತ್ತಾನೆ ಎಂದು ಅವನಿಗೆ ತಿಳಿದಿರುತ್ತದೆ. ಅವನಿಗೆ ಉತ್ತಮವಾಗಿದ್ದನ್ನು ಪಡೆಯುತ್ತಾನೆ ಎಂಬ ನಂಬಿಕೆಯಿಂದ ಆಸ್ತಿ ಸಂಪತ್ತನ್ನು ಸಹ ಕಳೆದುಕೊಳ್ಳುತ್ತಾನೆ.

ಇದರ ಸಾರಾಂಶವೆಂದರೆ ದೇವರ ಚಿತ್ತವನ್ನು ಆದ್ಯತೆ ನೀಡುವುದು ವೈರಗಿಯಾಗುತ್ತದೆ ಮತ್ತು ವೃರಾಗಿ ಹಾಗೂ ವಿಶ್ವಾಸಾರ್ಹವು ಜೊತೆ ಜೊತೆ ಇರುತ್ತದೆ. ವೈರಾಗಿಯ ರಹಸ್ಯವು ವಿಶ್ವಾಸವಾಗಿದೆ ಮತ್ತು ವಿಶ್ವಾಸಕ್ಕೆ ಷರತ್ತು ವೈರಾಗ್ಯವಾಗಿದೆ ಇದೇ ನಮ್ಮ ನಂಬಿಕೆಯಾಗಿದೆ. (ಮಲ್‌ಫೂಝಾತ್, ಪುಟ-554-555)

ಈಗ ನಾನು ತವಕ್ಕಲ್ (ಭರವಸೆ) ಹಾಗೂ ದುಆವಿನ ಸ್ವೀಕಾರದ ಕುರಿತು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ)ರವರ ಬರೆದಿರುವ ಸೀರತುಲ್ ಮಹದಿ ಎಂಬ ಗ್ರಂಥದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕೆಲವು ಈಮಾನ್ ವರ್ಧಕ ವರದಿಗಳನ್ನು ಪ್ರಸ್ತಾಪಿಸುತ್ತೇನೆ:

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಎಷ್ಟು ಅನನ್ಯರಾಗಿದ್ದರು ಮತ್ತು ಅವರು ಸರ್ವಶಕ್ತನಾದ ಅಲ್ಲಾಹನಲ್ಲಿ ಎಷ್ಟು ನಂಬಿಕೆಯನ್ನು ಹೊಂದಿದ್ದರು ಎಂಬುದರ ಬಗ್ಗೆ ಹಝ್ರತ್ ಚೌಧರಿ ಹಾಕಿಮ್ ಅಲೀ ಸಾಹಿಬ್ ನಂಬರ್ದಾರ್(ರ) ವರದಿ ಮಾಡುತ್ತಾರೆ ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನಮಗೆ ಏನಾದರೂ ನೋವುಂಟಾದರೆ ಉದಾಹರಣೆಗೆ ಶತ್ರುಗಳು ಕೇಸ್ ದಾಖಲಿಸುತ್ತಾರೆ ಅಥವಾ ಅಂತಹದ್ದೇನಾದರೂ ಸಂಭವಿಸಿದರೆ. ಆಗ ಸರ್ವಶಕ್ತನಾದ ಅಲ್ಲಾಹನು ನಮ್ಮ ಮನೆಗೆ ಪ್ರವೇಶಿಸಿದ್ದಾನೆ ಎಂದು ಭಾಸವಾಗುತ್ತದೆ. (ಸೀರತುಲ್ ಮಹದಿ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್, ಸಂಪುಟ-2, ಭಾಗ-4, ವರದಿ ಸಂಖ್ಯೆ-1169)

ಎದುರಾಳಿಯೊಂದಿಗೆ ಚರ್ಚೆ ನಡೆದಾಗಲೆಲ್ಲಾ ಅವರು ಅಲ್ಲಾಹನ ಮೇಲೆ ಮಾತ್ರ ಅವಲಂಬಿತರಾಗಿದ್ದರು. ಮತ್ತು ಅವರು ಅಲ್ಲಾಹನಿಂದಲೇ ಸಹಾಯವನ್ನು ಕೇಳುತ್ತಿದ್ದರು. ಅದರ ಹೊರತಾಗಿ, ಅವರು ಯಾರಿಂದಲೂ ಸಹಾಯ ಪಡೆಯುವುದು ಸೂಕ್ತವೆಂದು ಪರಿಗಣಿಸುತ್ತಿರಲಿಲ್ಲ. ಹೀಗೆ ಹಝ್ರತ್ ಮುನ್ಷಿ ಝಫರ್ ಸಾಹಿಬ್ ಕಪೂರ್‌ಥಾಲ್ವಿ(ರ) ವರದಿ ಮಾಡುತ್ತಾರೆ: ಅಥಮ್‌ನ ಚರ್ಚೆಯ ಸಂದರ್ಭದಲ್ಲಿ ಆಥಮ್ ಒಮ್ಮೆ ಎಂತಹ ಪ್ರಶ್ನೆಗಳನ್ನು ಕೇಳಿದನು ಎಂದರೆ ಅದರಿಂದ ನಮ್ಮ ಕೆಲವು ಸ್ನೇಹಿತರು ತಕ್ಷಣ ಉತ್ತರಿಸಲಾಗುವುದಿಲ್ಲ ಎಂದು ಭಯಭೀತಗೊಂಡರು ಮತ್ತು ಕೆಲವು ಸ್ನೇಹಿತರು ಸಮಿತಿಯನ್ನು ನೇಮಿಸಿ ಪವಿತ್ರ ಖುರ್‌ಆನ್ ಮತ್ತು ಬೈಬಲ್‌ನಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ಸಹಾಯ ಮಾಡಲು ಪ್ರಯತ್ನಿಸಿದರು. ಹಝ್ರತ್ ಮುನ್ಷಿ ಸಾಹಿಬ್(ರ.ಅ) ಹೇಳುತ್ತಾರೆ, ನಾನು ಮೌಲ್ವಿ ಅಬ್ದುಲ್ ಕರೀಂ ಸಾಹಿಬ್ ಅವರನ್ನು ತಮಾಷೆಯಿಂದ ಹೇಳಿದೆ ನಬುವ್ವತ್‌ಗಳು ಸಮಾಲೋಚನೆಯಿಂದ ನಡೆಯುತ್ತದೆಯೇ ಎಂದು ಹೇಳಿದೆ ಅಚ್ಚರಲ್ಲಿ ಹಝ್ರತ್ ಸಾಹಿಬ್ (ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್) ಬಂದು ಒಂದಿಷ್ಟು ವಿಷಯ ಕುರಿತು ಮಾತನಾಡಿ ಹೊರಡಲು ಪ್ರಾರಂಭಿಸಿದರು. ದಿವಂಗತ ಮೌಲ್ವಿ ಅಬ್ದುಲ್ ಕರೀಂ ಸಾಹಿಬ್ ನಿಂತು ನಾಳಿನ ಉತ್ತರಕ್ಕಾಗಿ ಸಮಾಲೋಚನೆ ಇದ್ದರೆ ಯಾವುದೇ ಸಮಸ್ಯೆ ಇಲ್ಲ ಎಂದು ಹೇಳಿದರು,

ಅದಕ್ಕೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು, "ನಿಮ್ಮ ಪ್ರಾರ್ಥನೆಯೇ ಸಾಕು" ಎಂದು ಹೇಳಿ ಅಲ್ಲಿಂದ ತಕ್ಷಣವೇ ಹೊರಟರು. ಈ ವರದಿಯು ಮಿರ್ಝಾ ಸಾಹಿಬ್ ಅವರು ಪುಸ್ತಕಗಳನ್ನು ಬರೆಯಲು ವಿದ್ವಾಂಸರನ್ನು ಮರೆಮಾಡಿದ್ದಾರೆ ಎಂದು ಹೇಳುವ ಜನರಿಗೆ ಉತ್ತರಿಸಲು ಸಹ ಸಾಕಾಗುತ್ತದೆ.(ಸೀರತುಲ್ ಮಹದಿ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್, ವರದಿ ಸಂಖ್ಯೆ-515)

ಹಝ್ರತ್ ಮಸೀಹ್ ಮೌಊದ್(ಅ) ಅವರು ಸರ್ವಶಕ್ತನಾದ ಅಲ್ಲಾಹನಲ್ಲಿ ಎಂತಹ ಆದರ್ಶಪ್ರಾಯ ನಂಬಿಕೆಯನ್ನು ಹೊಂದಿದ್ದರು, ಅವರು ಅಲ್ಲಾಹನನ್ನು ಹೊರತುಪಡಿಸಿ ಬೇರೆಯವರ ಮೇಲೆ ನಂಬಿಕೆಯ ಒಂದು ತುಣುಕನ್ನು ಇಡುವುದನ್ನು ಧರ್ಮನಿಂದೆಯೆಂದು ಪರಿಗಣಿಸುತ್ತಿದ್ದರು. ಇದಕ್ಕೆ ಹಝ್ರತ್ ಮುನ್ಷಿ ಝಫರ್ ಸಾಹಿಬ್ ಕಪೂರ್ಥಾಲ್ವಿ(ರ) ಅವರ ಒಂದು ವರದಿಯನ್ನು ಪ್ರಸ್ತುತಪಡಿಸುತ್ತೇನೆ. ಅವರು ಹೇಳುತ್ತಾರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ತಲೆ ನೋವಿನಿಂದ ಪೀಡಿತರಾಗಿದ್ದರು, ಒಬ್ಬ ವೈದ್ಯನ ಬಗ್ಗೆ ಅವನು ಇದರಲ್ಲಿ ವಿಶೇಷ ಪರಿಣಿತಿಹೊಂದಿದ್ದಾನೆ ಎಂದು ಕೇಳಲಾಯಿತು. ಅವನಿಗೆ ಬಾಡಿಗೆಯನ್ನು ನೀಡಿ ಕರೆಸಲಾಯಿತು. ಅವನು ಒದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ನೋಡಿ ನಾನು ಎರಡು ದಿನಗಳಲ್ಲಿಯೇ ನಿಮ್ಮನ್ನು ವಿಶ್ರಾಂತಿ ನೀಡುತ್ತೇನೆ ಎಂದು ಹೇಳಿದನು. ಇದನ್ನು ಕೇಳಿದ ತಕ್ಷಣ ಹಝ್ರತ್ ಸಾಹೇಬರು ಒಳಗೆ ಹೋಗಿ ಹಝ್ರತ್ ಮೌಲ್ವಿ ನೂರುದ್ದೀನ್ ಸಾಹೇಬ(ರ) ಅವರಿಗೆ ಬರೆದರು ನನಗೆ ಈ ವ್ಯಕ್ತಿಯಿಂದ ಚಿಕಿತ್ಸೆ ಮಾಡಿಸುವುದು ಇಷ್ಟವಿಲ್ಲ, ಏಕೆಂದರೆ ಅವನು ದೇವನೆಂದು ದಾವೆ ಮಾಡುತ್ತಿದ್ದಾನೆ. ಅವನಿಗೆ ಹಿಂದಿರುಗಲು ಬಾಡಿಗೆಯನ್ನು ನೀಡಿ ಅದರೊಂದಿಗೆ ಮತ್ತಷ್ಟು ಇಪ್ಪತ್ತು ಇಪ್ಪತ್ತೈದು ರೂಪಾಯಿಯನ್ನು ನೀಡಿ ಕಳುಹಿಸಿಕೊಡಿ. ಹೀಗೆಯೇ ಮಾಡಲಾಯಿತು. (ಸೀರತುಲ್ ಮಹದಿ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ), ವರದಿ ಸಂಖ್ಯೆ-1038)

ಈಗ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕೆಲವು ಈಮಾನದದ ವರ್ಧಕ ವರದಿಗಳು ಸೀರತುಲ್ ಮಹ್ದಿಯಿಂದ ಪ್ರಾರ್ಥನೆಯ ಸ್ವೀಕಾರದ ಬಗ್ಗೆ ಪ್ರಸ್ತುತ ಪಡಿಸುತ್ತೇನೆ:

ಗೌರವಾನ್ವಿತ ಮುಫ್ತಿ ಮುಹಮ್ಮದ್ ಸಾದಿಕ್ ಸಾಹಿಬ್ ನನಗೆ ಹೇಳಿದರು ಸರ್ ಸೈಯದ್ ಅಹ್ಮದ್ ಖಾನ್ ಸಾಹಿಬ್ ಅವರು ಪ್ರಾರ್ಥನೆಯು ಕೇವಲ ಆರಾಧನೆಯ ಕ್ರಿಯೆಯಾಗಿದೆ ಇಲ್ಲದಿದ್ದರೆ ಅಲ್ಲಾಹನು ಅದರ ಕಾರಣದಿಂದ ತನ್ನ ವಿಧಿ ಬದಲಾಯಿಸುವುದಿಲ್ಲ ಎಂಬ ನಂಬಿಕೆಯನ್ನು ವ್ಯಕ್ತಪಡಿಸಿದ್ದಾರೆ. ಅದೇನೇ ಇದ್ದರೂ ಅದು ತನ್ನದೇ ಆದ ಮಾರ್ಗವನ್ನು ಅನುಸರಿಸುತ್ತದೆ. ಅದಕ್ಕೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು "ಬರಕಾತುದ್ದುಆ" ಎಂಬ ನಿಯತಕಾಲಿಕವನ್ನು ಬರೆದು ಪ್ರಕಟಿಸಿದರು ಮತ್ತು ಅದರಲ್ಲಿ ಪ್ರಾರ್ಥನೆಯು ಕೇವಲ ಆರಾಧನೆಯಲ್ಲ, ಬದಲಿಗೆ ಅದರ ಪರಿಣಾಮವಾಗಿ ಅಲ್ಲಾಹನು ತನ್ನ ವಿಧಿಯನ್ನು ಸಹ ಬದಲಾಯಿಸುತ್ತಾನೆ ಏಕೆಂದರೆ ಅಲ್ಲಾಹನು ಮಹಿಮಾವಂತನೂ, ಶಕ್ತಿಶಾಲಿಯೂ ಆಗಿದ್ದಾನೆ ಮತ್ತು ತನ್ನ ವಿಧಿಯ ಮೇಲೆ ಪ್ರಬಲ್ಯ ಹೊಂದಿದ್ದಾನೆ ಮತ್ತು ಇಸ್ಲಾಮಿನ ಬೋಧನೆಯ ಅಡಿಯ ಮೂಲಕ ಸರ್ ಸಯ್ಯದ್ ಅಹ್ಮದ್ ಹೊಂದಿರುವ ಈ ನಂಬಿಕೆಯು ತಪ್ಪಾಗಿದೆ ಎಂದು ಸಾಬೀತುಪಡಿಸಿದರು. ಈ ಪುಸ್ತಕವನ್ನು ಮುದ್ರಿಸಿ ಸಿದ್ಧವಾದಾಗ, ಹಝ್ರತ್ ಮಸೀಹ್ ಮೌಊದ್(ಅ) ಅವರು ಅದರ ಒಂದು ಪ್ರತಿಯನ್ನು ಸರ್ ಸೈಯದ್ ಅವರಿಗೆ ಕಳುಹಿಸಿದರು. ಅದಕ್ಕೆ ಸರ್ ಸೈಯದ್ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ಒಂದು ಪತ್ರವನ್ನು ಬರೆದರು, ಈ ಪತ್ರದಲ್ಲಿ ಅವರು ಕ್ಷಮೆಯಾಚನೆಯ ರೂಪದಲ್ಲಿ ನಾನು ಈ ಕ್ಷೇತ್ರದ ಮನುಷ್ಯನಲ್ಲ ಆದ್ದರಿಂದ ನನ್ನಿಂದ ತಪ್ಪಾಗಿದೆ ಮತ್ತು ನೀವು ಬರೆದದ್ದು ಸರಿಯಾಗಿದೆ ಎಂದು ಬರೆದರು. (ಸೀರತುಲ್ ಮಹದಿ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ), ವರದಿ ಸಂಖ್ಯೆ-830)

ಈಗ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ದುಆಗಳ ಸ್ವೀಕಾರದ ಕೆಲವು ಭವ್ಯವಾದ ಪವಾಡಗಳನ್ನು ಪ್ರಸ್ತುತಪಡಿಸುತ್ತಾನೆ.

ಆತ್ಮೀಯ ಕೇಳುಗೇ!! ಕ್ರಿಶ್ಚಿಯನ್ನರು ಈದ ಮಸೀಹನನ್ನು (ಕ್ರೈಸ್ತನನ್ನು) ಕೆಲವು ಘಟನೆಗಳನ್ನು ಆಧಾರವಾಗಿರಿಸಿ ದೈವ ಎಂದು ರೂಪಿಸಿದ್ದಾರೆ ಏಕೆಂದರೆ ಅವರು ರೋಗಿಗಳನ್ನು ಗುಣಪಡಿಸುತ್ತಿದ್ದರು, ಅಂಗವಿಕಲರನ್ನು ಗುಣಪಡಿಸುತ್ತಿದ್ದರು, ಅವರು ಕುರುಡರಿಗೆ ದೃಷ್ಟಿ ನೀಡಿದರು ಮತ್ತು ಸತ್ತವರಿಗೆ ಜೀವ ನೀಡಿದರು ಎಂದು. ಇದರರ್ಥ ಆಧ್ಯಾತ್ಮಿಕವಾಗಿ ಕುರುಡರಿಗೆ ದೃಷ್ಟಿ ನೀಡುವುದು ಮತ್ತು ಆಧ್ಯಾತ್ಮಿಕ ಪುರುಷರಿಗೆ ಆಧ್ಯಾತ್ಮಿಕ ಜೀವನವನ್ನು ಉಸಿರಾಡುವುದು ಎಂದಾದರೂ, ಬಾಹ್ಯ ದೃಷ್ಟಿ ತೊಂದರೆಗೊಳಗಾದ ಅಥವಾ ಅವರು ಬಹುತೇಕ ರೋಗಿಗಳ ಕೆಲವು ರೋಗಿಗಳನ್ನು ಸಹ ನೀವು ಗುಣಪಡಿಸಿದ್ದೀರಿ ಎಂಬುದರಲ್ಲಿ ಸಂದೇಹವಿಲ್ಲ, ಆದ್ದರಿಂದ ಕ್ರಿಶ್ಚಿಯನ್ನರು ಅವರನ್ನು ದೇವರು ಎಂದು ಪರಿಗಣಿದರು.

ಅಂತಹ ಚಿಕಿತ್ಸೆ ಮತ್ತು ಅಂತಹ ಜೀವನದ ಉದಾಹರಣೆಗಳನ್ನು ಬದಲಿಗೆ ಅದಕ್ಕಿಂತ ಹೆಚ್ಚಿನ ಉದಾಹರಣೆಗಳನ್ನು ಮಸೀಹೆ ಮುಹಮ್ಮದಿ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ ಅಲೈಹಿಸ್ಸಲಾಮ್ ಅವರ ಅನುಗ್ರಹದಾಯಕ ಜೀವನದಲ್ಲಿ ನಾವು ಕಂಡುಕೊಳ್ಳಬಹುದು. ಅಂದರೆ ಅಲ್ಲಾಹನು ಅವರ ದುಆವಿನ ಕಾರಣದಿಂದ ಇಂತಹ ರೋಗಿಗಳನ್ನು ಗುಣಪಡಿಸಿದ್ದಾರೆ.

ಹಝ್ರತ್ ಮೌಲವಿ ಮುಹಮ್ಮದ್ ಇಬ್ರಾಹೀಮ್ ಸಾಹಿಬ್ ಬಖಾಪೂರಿ(ರ) ವರದಿ ಮಾಡುತ್ತಾರೆ: ಒಮ್ಮೆ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸೇವೆಯಲ್ಲಿ ನನ್ನ ಕಣ್ಣುಗಳಲ್ಲಿ ಬಹಳ ನೀರು ಬರುತ್ತದೆ ನನಗಾಗಿ ದುಆ ಮಾಡಿ ಎಂದು ಕೇಳಿಕೊಂಡೆ. ಅದಕ್ಕೆ ಹುಝೂರ್ ಅಲೈಹಿಸ್ಸಲಾಮ್ ನಾನು ದುಆ ಮಾಡುತ್ತೇನೆ. ನೀವು ಮೌಲವಿ ಸಾಹಿಬ್(ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ)) ಅವರಿಂದ ಅತ್ರೀಫಲ್ ಝುಮಾನಿ ಯನ್ನು ಸಹ ತೆಗೆದುಕೊಳ್ಳಿ ಎಂದು ಹೇಳಿದರು. ತದನಂತರ ಅಂದಿನಿಂದ ಇಂದಿನವರೆಗೂ ನನಗೆ ಆ ರೋಗ ಮತ್ತೆ ಬಂದಿಲ್ಲ. (ಸೀರತುಲ್ ಮಹದಿ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ), ವರದಿ ಸಂಖ್ಯೆ-817)

ಹಝ್ರತ್ ಮುನ್ಷಿ ಅಬ್ದುಲ್ ಅಝೀಝ್ ಸಾಹಿಬ್ ಓಜಲ್ವಿ(ರ) ವರದಿ ಹೇಳುತ್ತಾರೆ: ಓರ್ವ ವ್ಯಕ್ತಿ ಮುಸಮ್ಮಿ ಸಾನೂಂ ಸೇಖ್ವಾಂ ಎಂಬವರು ನನ್ನೊಂದಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬೈಅತ್ ಮಾಡಿದರು. ಈಗ ಅವರು ಬಹಿಶ್ತಿ ಮಖ್ಬರದಲ್ಲಿ ದಫನ್ ಆಗಿದ್ದಾರೆ ಅವರಿಗೆ ನುಝೂಲು ಮಾ (ಕಣ್ಣುಗಳಿಂದ ನೀರು ಬರುವುದು) ರೋಗದಿಂದ ಬಳಲುತ್ತಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಅವರಿಗೆ ಕಣ್ಣುಗಳನ್ನು ತೋರಿಸಿದರು. ಅದಕ್ಕೆ ಅವರು ಹೇಳಿದರು ಮೊದಲು ನೀರು ಬಂದು ದೃಷ್ಟಿ ಸಂಪೂರ್ಣ ಹೋಗುತ್ತದೆ. ನಂತರ ಅವರಿಗೆ ಚಿಕಿತ್ಸೆ ನೀಡಲಾಗುವುದು. ಇದರಿಂದ ಅವರು ತುಂಬಾ ಆಘಾತಕ್ಕೊಳಗಾದರು. ಅದರ ನಂತರ, ಅವರು ಈ ವಿಧಾನವನ್ನು ಅಳವಡಿಸಿಕೊಂಡರು, ಅಂದರೆ ಅವರು ಖಾದಿಯಾನ್‌ಗೆ ಬಂದಾಗ ಮತ್ತು ಹುಝೂರ್ ಅಲೈಹಿಸ್ಸಲಾಮ್ ಅವರ ಬಳಿ ಕುಳಿತುಕೊಳ್ಳಲು ಅವಕಾಶ ಸಿಕ್ಕಾಗ, ಅವರು ಹುಝೂರ್ ಅಲೈಹಿಸ್ಸಲಾಮ್ ಅವರ ಶಿಮ್ಲಾ ಮನಾರಿಕ್ ಅನ್ನು ತಮ್ಮ ಕಣ್ಣುಗಳಿಗೆ ಹಚ್ಚಿಕೊಳ್ಳುತ್ತಿದ್ದರು. ಸ್ವಲ್ಪ ಸಮಯದ ನಂತರ, ಅವರ ಕಣ್ಣಿನ ರೋಗವು ಕಡಿಮೆಯಾಗುತ್ತಲೇ ಹೋಯಿತು ಮತ್ತು ಅವರ ಜೀವಂತ ಕಾಲದಲ್ಲಿ ಎಂದಿಗೂ ಅವರಿಗೆ ಕಣ್ಣುಗಳ ಸಮಸ್ಯೆ ಬಂದಿಲ್ಲ. ಯಾವುದೇ ಚಿಕಿತ್ಸೆಯ ಅವಶ್ಯಕತೆಯು ಬೀಳಲಿಲ್ಲ. (ಸೀರತುಲ್ ಮಹದಿ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ), ವರದಿ ಸಂಖ್ಯೆ-568)

ಈಗ ಅವರು ಪ್ರಾರ್ಥನೆಯ ಸ್ವೀಕಾರದ ಮತ್ತೊಂದು ಈಮಾನ್ ವರ್ಧಕ ಘಟನೆಯನ್ನು ನೋಡಿ.

ಹಝ್ರತ್ ಡಾ. ಸೈಯದ್ ಅಬ್ದುಲ್ ಸತ್ತಾರ್ ಶಾಹಾ ಸಾಹಿಬ್(ರ) ವರದಿ ಮಾಡುತ್ತಾರೆ: ಒಮ್ಮೆ ಅವರು ತಮ್ಮ ಕುಟುಂಬದೊಂದಿಗೆ ಮೂರು ತಿಂಗಳ ಕಾಲ ರಜೆ ತೆಗೆದುಕೊಂಡು ಖಾದಿಯಾನ್‌ಗೆ ಬಂದರು. ಆ ದಿನಗಳಲ್ಲಿ ವಲೀವುಲ್ಲಾ ಶಾಹ್ ಸಾಹಿಬ್ ಅವರ ಪತ್ನಿಯವರ ಹಲ್ಲಿನಲ್ಲಿ ತೀವ್ರವಾದ ನೋವು ಕಾಣಿಕೊಂಡಿತು. ಅದರಿಂದ ಅವರಿಗೆ ಹಗಲಿರುಳು ನಿದ್ರೆಯೇ ಬರುತ್ತಿರಲಿಲ್ಲ. ವೈದ್ಯಕೀಯ ಚಿಕಿತ್ಸೆಯೂ ಮಾಡಿಸಲಾಯಿತು ಆದರೆ ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಹಝ್ರತ್ ಖಲೀಫತುಲ್ ಮಸೀಹ ಅವ್ವಲ್(ರ) ಚಿಕಿತ್ಸೆ ನೀಡಿದರು ಅದರಿಂದಲೂ ಯಾವ ಪ್ರಯೋಜನವಾಗಲಿಲ್ಲ. ಹಝ್ರತ್ ಉಮ್ಮುಲ್ ಮುಮಿನೀನ್(ರ) ರವರು ಹುಝೂರ್(ಅ)ರವರಲ್ಲಿ ಹೇಳಿದರು ಡಾ. ಸೈಯದ್ ಅಬ್ದುಸ್ಸತ್ತಾರ್ ಶಾಹ್ ಸಾಹಿಬ್ ಅವರ ಪತ್ನಿಯ ಹಲ್ಲಿನಲ್ಲಿ ನೋವುಂಟಾಗಿದೆ. ಅದಕ್ಕೆ ಹುಝೂರ್ ಅಲೈಹಿಸ್ಸಲಾಮ್ ಹೇಳಿದರು ಅವರಿಗೆ ನನ್ನ ಬಳಿ ಕಳುಹಿಸಿ ನಾನು ನೋಡುತೇನೆ. ಹೀಗಾಗಿ ಅವರು ಬಂದು ಹುಝೂರ್ ಅಲೈಹಿಸ್ಸಲಾಮ್ ಅವರಿಗೆ ತಮ್ಮ ತೊಂದರೆಯನ್ನು ವಿವರಿಸಿದರು. ಅದಕ್ಕೆ ಹುಝೂರ್ ಅಲಯಹಿಸ್ಸಲಾಮ್ ಹೇಳಿದರು ನೀವು ಸ್ವಲ್ಪ ಹೊತ್ತು ಕಾಯಿರಿ. ತದನಂತರ ಹುಝೂರ್ (ಅ) ರವರು ವಝೂ ಮಾಡಿ ಹೇಳಿದರು ನಾನು ನಿಮಗಾಗಿ ದುಆ ಮಾಡುತ್ತೇನೆ ಅಲ್ಲಾಹನು ನಿಮಗೆ ಗುಣಪಡಿಸುವನು. ಹುಝೂರ್ ಅಲೈಹಿಸ್ಸಲಾಮ್ ರವರು ಎರಡು ನಫಿಲ್‌ಗಳನ್ನು ಪಠಿಸಿದರು ಅವರು ಸುಮ್ಮನೆಕುಳಿತಿದ್ದರು. ಇಷ್ಟರಲ್ಲಿ ಅವರ

ಯಾವ ಹಲ್ಲಿನಲ್ಲಿ ತೊಂದರೆ ಇತ್ತು ಆ ಹಲ್ಲಿನ ಕೆಳಗಿನಿಂದ ಒಂದು ಜ್ವಾಲೆಯು ಹೊಗೆಯ ರೀತಿಯಲ್ಲಿ ಹುಟ್ಟಿ ಆಕಾಶದ ಕಡೆಗೆ ಹಾದು ಹೋಯಿತು. ಅದರೊಂದಿಗೆ ನೋವು ಸಹ ಕಡಿಮೆಯಾಯಿತು. ತದನಂತರ ಹುಝೂರ್ ಅಲೈಹಿಸ್ಸಲಾಮ್ ಹೇಳಿದರು– ಈಗ ಹೇಳಿ ನೀವು ಹೇಗಿದ್ದೀರಿ? ಅದಕ್ಕೆ ಅವರು ಹೇಳಿದರು ಹುಝೂರ್ ಅಲೈಹಿಸ್ಸಲಾಮ್ ಅವರ ದುಆವಿನ ಕಾರಣದಿಂದ ತೊಂದರೆಯಿಂದ ಮುಕ್ತಿಯಾಯಿತು. ಅವರಿಗೆ ಈ ತೊಂದರೆ ದೂರಾಗಿದ್ದರಿಂದ ಅವರಿಗೆ ಬಹಳ ಸಂತೋಷವಾಯಿತು.

ಮರಾಖ್ (ಮಾನಸಿಕ ಕಾಯಿಲೆ) ಎಂಬ ರೋಗದಿಂದ ಪವಾಡ ಸದೃಶ್ಯರೂಪವಾಗಿ ಗುಣಮುಖರಾದ ಘಟನೆ ಹೀಗಿದೆ:

ಹಝ್ರತ್ ಡಾ. ಸಯ್ಯದ್ ಅಬ್ದುಸ್ಸತ್ತಾರ್ ಶಾಹ್ ಸಾಹಿಬ್(ರ) ಹೇಳುತ್ತಾರೆ: ನನ್ನ ಪುತ್ರಿ ಝೈನಬ್ ಬೇಗಮ್ ನನಗೆ ಹೇಳಿದಳು ಒಮ್ಮೆ ಹುಝೂರ್ ಅಲೈಹಿಸ್ಸಲಾಮ್ ಸಿಯಾಲ್‌ಕೋಟ್‌ನಲ್ಲಿ ಹೋದಾಗ ನಾನು ರೈಯದಿಂದ ಅವರ ಸೇವೆಯಲ್ಲಿ ಹಾಜರಾದೆ. ಆ ಕಾಲದಲ್ಲಿ ನನಗೆ ಮರಾಖ್‌ನ ರೋಗ್ರವು ತೀವ್ರವಾಗಿ ಇತ್ತು. ನಾನು ನಚಿಕೆಯಿಂದಾಗಿ ಹುಝೂರ್ ಅಲೈಹಿಸ್ಸಲಾಮ್‌ಗೆ ಏನೂ ಹೇಳಲಿಲ್ಲ. ಆದರೆ ಹೇಗಾದರೂ ಹುಝೂರ್(ಅ) ಅವರಿಗೆ ನನ್ನ ರೋಗದ ಬಗ್ಗೆ ತಿಳಿಯಬೇಕು ಇದರಿಂದಾಗಿ ಹುಝೂರ್(ಅ)ರವರು ನನಗೋಸ್ಕರ ದುಆ ಮಾಡುತ್ತಾರೆ ಎಂದು ನನ್ನ ಮನಸ್ಸಿನಲ್ಲಿ ಒಂದು ಆಸೆ ಹುಟ್ಟಿತು. ನಾನು ಹುಝೂರ್(ಅ) ಅವರ ಸೇವೆಯಲ್ಲಿ ತೊಡಗಿದ್ದೆ ಹುಝೂರ್(ಅ)ರವರು ದೈವದರ್ಶನ ಮತ್ತು ಶುದ್ಧ ಮನಸ್ಸಿನಿಂದ ಸ್ವತಃ ತಿಳಿದುಕೊಂಡು ಹೇಳಿದರು: ಝೈನಬ್ ನಿನಗೆ ಮರಾಖ್ ರೋಗದ ಸಮಸ್ಯೆ ಇದೆಯೇ? ನಾನು ದುಆ ಮಾಡುವೆನು. ನೀನು ಏರಾದರು ವ್ಯಾಯಾಮ ಮಾಡು ಮತ್ತು ಬಹಳ ನಡೆಯಬೇಕು ಆದರೆ ನನಗೆ ಒಂದು ಹೆಜ್ಜುಯು ನಡೆಯಲು ಸಾಧ್ಯವಿರಲಿಲ್ಲ. ಒಂದು ವೇಳೆ ಎರಡು ಮೂರು ಹೆಜ್ಜೆ ನಡೆದರೆ ನನಗೆ ಮರಾಖ್ ಮತ್ತು ಖಫ್‌ಖಾನ್‌ನ ಸಮಸ್ಯೆಯು ತೀವ್ರವಾಗುತ್ತಿತ್ತು. ನಾನು ನನ್ನ ಮನೆಗೆ ಹೋಗುವುದಕ್ಕೆ ಅದು ಹುಝೂರ್(ಅ)ರವರ ಮನೆಯಿಂದ ಸುಮಾರು ಒಂದು ಮೈಲಿ ದೂರದಲ್ಲಿತ್ತು. ಟಾಂಗವನ್ನು ಹುಡುಕುತ್ತಿದ್ದೆ ಆದರೆ ಅದು ನನಗೆ ಸಿಗಲಿಲ್ಲ. ಹಾಗಾಗಿ ನಡೆಯಬೇಕಿತ್ತು. ನನಗೆ ಈ ನಡಿಗೆಯ ತೀವ್ರ ಕಷ್ಟ ಮತ್ತು ಮರಣದಂತೆ ತೋರಿತು, ಆದರೆ ಅಲ್ಲಾಹನ ಅನುಗ್ರಹದಿಂದ ನಡೆದಾಗ ನನಗೆ ಆರಾಮಾಗುತ್ತಿದೆ ಎಂದು ಭಾಸವಾಗುತ್ತಿತ್ತು. ಎರಡನೆ ದಿನವೂ ಕಾಲ್ನಡಿಗೆಯಲ್ಲಿ ಹುಝೂರ್ ಅಲೈಹಿಸ್ಸಲಾಮ್ ಅವರನ್ನು ಭೇಟಿ ಮಾಡಲು ಬಂದಾಗ, ಮರಾಕ್ ರೋಗವೂ ಗುಣಮುಖವಾಗುತ್ತಿರುವುದಾಗಿ ಭಾಸವಾಗುತ್ತಿತ್ತು ಮತ್ತು ನಾನು ಸಂಪೂರ್ಣವಾಗಿ ನಿರಾಳವಾಗಿದ್ದೇನೆ. ಸುಬ್ಹಾನಲ್ಲಾಹ್!! ಮುಹಮ್ಮದರ ಮಸೀಹನ ಮಹಿಮೇ ಎಂತಹದ್ದಾಗಿದೆ.

(ಸೀರತುಲ್ ಮಹದಿ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ (ರ), ವರದಿ ಸಂಖ್ಯೆ–917)

ಹಝ್ರತ್ ಮಿಯಾನ್ ಫೈಝ್ ಅಲೀ ಸಾಹಿಬ್ ಕಪೂರ್‌ಥಾಲ್ವಿ ಅವರ ಒಂದು ವರದಿ ಇದೆ ಅವರು ಹೇಳುತ್ತಾರೆ ಇದರಿಂದ ನಮಗೆ ತಿಳಿಯುವುದೇನೆಂದರೆ ದುಆವಿನ ಸ್ವೀಕಾರ ಮತ್ತು ಹಝ್ರತ್ ಮಸೀಹ್ ಮೌಊದ್(ಅ) ಅವರ ಗುಣಪಡಿಸುವಿಕೆಯ ಪವಾಡಗಳು ಅವರ ನಂತರವೂ ಅಹ್ಮದಿಯಾ ಖಿಲಾಫತ್‌ನಲ್ಲಿ ಮುಂದುವರಿಯುತ್ತಿದೆ. ಅವರು ಹೇಳುತ್ತಾರೆ: ನನ್ನ ಒಬ್ಬ ಪುತ್ರನಿಗೆ ಅಪಸ್ಮಾರ (ಮಿರ್ಗಿ) ಇತ್ತು. ಅನೇಕ ಚಿಕಿತ್ಸೆಗಳನ್ನು ಹೊಂದಿದ್ದರು ಆದರೆ ಪ್ರತಿ ಸ್ಥಳದಿಂದ ನಿರಾಶೆಗೊಂಡರು. ಖಾದಿಯಾನ್‌ನಲ್ಲಿ, ಮೌಲಾನಾ ಹಕೀಮ್ ನೂರುದ್ದೀನ್ ಸಾಹಿಬ್(ರ) ಖಲೀಫತುಲ್ ಮಸೀಹ್ ಅವ್ವಲ್ ಅವರ ಬಳಿ ನನ್ನ ಪುತ್ರನ ತಾಯಿಯೊಂದಿಗೆ ಕಳುಹಿಸಲಾಯಿತು, ಆದರೆ ಯಾವುದೇ ಪ್ರಯೋಜನವಾಗಲಿಲ್ಲ. ಮತ್ತು ಅವರ ತಾಯಿ ನಿರಾಶೆಗೊಂಡು ಮನೆಗೆ ಮರಳಲು ಪ್ರಾರಂಭಿಸಿದರು, ಆ ಸಮಯದಲ್ಲಿ ಅವರು ಹಝ್ರತ್ ಉಮ್ಮುಲ್ ಮುಮಿನೀನ್(ರ) ಅವರ ಮನೆಯಲ್ಲಿ ತಂಗಿದ್ದರು. ಹಝ್ರತ್ ಉಮ್ಮುಲ್ ಮುಮಿನೀನ್(ರ) ಹುಡುಗನ ತಾಯಿಗೆ ಹೇಳಿದರು. ನಿಂತುಕೊಳ್ಳಿ ನಾನು ದುಆ ಮಾಡುತ್ತೇನೆ. ಹೀಗೆ ಅವರು ಸುಮಾರು ಎರಡು ಗಂಟೆಕಾಲ ಹುಡುಗನ ಆರೋಗ್ಯಕ್ಕಾಗಿ ದುಆ ಮಾಡಿದರು. ಕಣ್ಣುಗಳಿಂದ ಕಣ್ಣೀರು ಹರಿಯುತ್ತಿತ್ತು. ರಾತ್ರಿಯಲ್ಲಿ, ಹುಡುಗನು ಕನಸ್ಸಿನಲ್ಲಿ ಇದು ಬೆಳದಿಂಗಳ ರಾತ್ರಿಯಾಗಿದೆ ಮತ್ತು ನಾನು ಅಪಸ್ಮಾರದಿಂದ ಬಳಲುತ್ತಿದ್ದೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬೈತುದ್ದುಆದ ಕಿಡಕಿಯಿಂದ ಬಂದು ನನ್ನನ್ನು ನೋಡಿ ನಿಮ್ಮ ಸ್ಥಿತಿ ಏನಾಗಿದೆ ಎಂದು ವಿಚಾರಿಸಿದರು. ಹುಝೂರ್ ತಾವೇ ನೋಡಬೇಕು ಎಂದು ವಿನಂತಿಸಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನನ್ನ ತಲೆಯ ಮೇಲೆ ಕೈಯಿಟ್ಟು ಹೇಳಿದರು, ಚಿಂತಿಸಬೇಡಿ, ಗುಣಮುಖನಾಗುತ್ತೀಯ. ಅದರ ನಂತರ, ಅವರ ತಾಯಿ ಹುಡುಗನೊಂದಿಗೆ ಮನೆಗೆ ಮರಳಿದರು. ನಂತರ ನಾನು ಪ್ರತಿಯೊಬ್ಬ ಪ್ರಸಿದ್ಧ ವೈದ್ಯರಿಂದ ಹುಡುಗನಿಗೆ ಚಿಕಿತ್ಸೆ ನೀಡುತ್ತಿದ್ದೆ. ಅಂತಿಮವಾಗಿ, ಅವರು ಮೀರತ್ ಜಿಲ್ಲೆಯ ಹಾಪಡ್‌ನ ಓರ್ವ ವೈದ್ಯರ ಬಳಿಗೆ ಹೋದರು. ಆ ವೈದ್ಯನು ಮದ್ದು ಬರೆದುಕೊಟ್ಟು ರಾತ್ರಿ ಅವರ ಮುಂದೆ ತಿನ್ನಿಸಿದರು. ಆ ವೇಳೆ ಹುಡುಗನಿಗೆ ತೀವ್ರ ಅಪಸ್ಮಾರ (ಮಿರ್ಗಿ) ಬಂದಿತ್ತು. ಆ ವೈದ್ಯರು ಅವರ ಮನೆಯೊಳಗೆ ಹೋಗಿ ಮಲಗಿದರು. ಮತ್ತು ನಾವಿಬ್ಬರೂ ಪುರುಷರು ಮಲಗುವ ಜಾಗದಲ್ಲಿ ಹೊರಗೆ ಮಲಗಿದೆವು. ಬೆಳಿಗ್ಗೆ ನಮಾಝ್ ನಿರ್ವಹಿಸಿದೆವು. ವೈದ್ಯರು ಕೂಡ ಮನೆಯಿಂದ ಹೊರಗೆ ಬಂದರು. ರಾತ್ರಿಯಲ್ಲಿ ನನಗೆ ಕನಸು ಬಿದ್ದಿದೆ ಎಂದು ವೈದ್ಯರು ಹೇಳಿದರು. ನನ್ನ ಕೈಯಲ್ಲಿ ಒಂದು ಪುಸ್ತಕ ಕೊಟ್ಟಿರುವುದನ್ನು ನೋಡಿದೆ. ಅದನ್ನು ತೆರೆದಾಗ ಆರಂಭದಲ್ಲಿ ಬರೆದಿತ್ತು. ಈ ರೋಗದ ಚಿಕಿತ್ಸೆಯು ಹುಣಸೆಹಣ್ಣು ಆಗಿದೆ. ಪ್ರಪಂಚದಲ್ಲಿ ಹುಣಸೆಹಣ್ಣನ್ನು ಬಿಟ್ಟರೆ ಈ ರೋಗಕ್ಕೆ ಮದ್ದು ಇಲ್ಲ ಎಂದು ಆರೇಳು ಸಾಲುಗಳಲ್ಲಿ ಬರೆಯಲಾಗಿತ್ತು. ನನಗೆ ಕಾಯಿಲೆಯ ಬಗ್ಗೆಯಾಗಲಿ ಚಿಕಿತ್ಸೆಯ ಬಗ್ಗೆಯಾಗಲಿ ಅರ್ಥವಾಗುತ್ತಿಲ್ಲ ಎಂದು ವೈದ್ಯರು ಹೇಳಿದರು. ನಾನು ನಿನಗೆ ನನ್ನ ಕನಸನ್ನು ಹೇಳಿದ್ದೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಶುಭವಾರ್ತೆಯ ಪ್ರಕಾರ ನಾನು ವೈದ್ಯರ ಈ ಕನಸನ್ನು ದೇವರಿಂದ ದೈವವಾಣಿ ಎಂದು ಪರಿಗಣಿಸಿದೆ ಮತ್ತು ಹುಡುಗನಿಗೆ ಮನೆಗೆ ಕರೆದುಕೊಂಡು ಬಂದು ಹುಣಸೆಹಣ್ಣು ಬಳಸಲು ಪ್ರಾರಂಭಿಸಿದೆ. ರಾತ್ರಿ ನಾಲ್ಕು ತೊಲಗಳನ್ನು ನೆನೆಯುತ್ತಿದ್ದೆ. ಮುಂಜಾನೆ ಸೋಸಿದ ನಂತರ ಕಲ್ಲಿಸಕ್ಕರೆಯನ್ನು ಬೆರಿಸಿ ಹುಡುಗನಿಗೆ ಕುಡಿಸುತ್ತಿದ್ದೆ. ಎರಡು ವಾರಗಳಲ್ಲಿ, ಹುಡುಗನು ಕಾಯಿಲೆಯಿಂದ ಚೇತರಿಸಿಕೊಂಡನು. ಮತ್ತು ದೇವರ ದಯೆಯಿಂದ ಪ್ರಸ್ತುತ ಪದವೀಧರನಾಗಿ ಒಳ್ಳೆಯ ಉದ್ಯೋಗಲ್ಲಿದ್ದಾನೆ. (ಸೀರತುಲ್ ಮಹದಿ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ (ರ) ವರದಿ ಸಂಖ್ಯೆ–981)

ಹಝ್ರತ್ ಡಾ. ಸೈಯದ್ ಅಬ್ದುಲ್ ಸತ್ತಾರ್ ಶಾಹ್ ಸಾಹಿಬ್(ರ) ಹೇಳೂತ್ತಾರೆ: ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬೈಅತ್ ಮಾಡಿ ಕೆಲಸಕ್ಕೆ ಹೋದಾಗ ಕೆಲವು ದಿನಗಳ ಕಾಲ ತಮ್ಮ ಬೈಅತ್ ಅನ್ನು ರಹಸ್ಯವಾಗಿರಿಸಿದೆ ಏಕೆಂದರೆ ಬಲವಾದ ವಿರೋಧ ಇತ್ತು. ಮತ್ತು ಜನರು ನನ್ನನ್ನು ತುಂಬಾ ನಂಬಿದ್ದರು. ಈ ಕಾರಣದಿಂದಾಗಿ ಸ್ವಲ್ಪ ದೌರ್ಬಲ್ಯವನ್ನು ತೋರಿಸಿದೆ, ನಾನು ಅದನ್ನು ನನ್ನ ಕುಟುಂಬಕ್ಕೂ ಸಹ ತಿಳಿಸಿರಲಿಲ್ಲ. ಆದರೆ ಕ್ರಮೇಣ ಇದು ಸ್ಪಷ್ಟವಾಯಿತು ಮತ್ತು ಕೆಲವರು ವಿರೋಧಿಸಲು ಪ್ರಾರಂಭಿಸಿದರು ಆದರೆ ಅವರು ಯಾವುದೇ ಹಾನಿ ಮಾಡಲು ಸಾಧ್ಯವಾಗಲಿಲ್ಲ. ನೀವು ಬೈಅತ್ ಮಾಡಿದ್ದೀರಿ ಆದರೆ ನಿಮ್ಮ ಮೊದಲ ಸಂತರು ಇನ್ನು ಜೀವಂತವಾಗಿದ್ದಾರೆ ಅವರು ಕೋಪಗೊಂಡು ನಿಮ್ಮ ಮೇಲೆ ಕೆಟ್ಟ ದುಆ ಮಾಡುತ್ತಾರೆ ಎಂದು ಮನೆಯವರು ಹೇಳಿದರು. ಅವರು ಆಗಾಗ್ಗೆ ನಮ್ಮನ್ನು ಭೇಟಿಯಾಗುತ್ತಿದ್ದರು. ಅದಕ್ಕೆ ನಾನು ಅವರಿಗೆ ಹೇಳಿದೆ ನಾನು ಅಲ್ಲಾಹನ ಸಂಪ್ರೀತಿಗಾಗಿ ಬೈಅತ್ ಮಾಡಿದ್ದೇನೆ. ಮತ್ತು ಯಾರ ಕೈಯಲ್ಲಿ ಬೈಅತ್ ಮಾಡಿದ್ದೇನೊ ಅವರು ವಾಗ್ದಾತ್ತ ಮಸೀಹ್ ಹಾಗೂ ಮಹದಿ ಆಗಿದ್ದಾರೆ. ಬೇರೆಯವರು ಎಷ್ಟೇ ಒಳ್ಳೆಯವರಾಗಿರಲಿ ಅಥವಾ ಪುಣ್ಯವಂತರಾಗಿರಲಿ. ಅವರು ಆ ಮಟ್ಟವನ್ನು ತಲುಪಲು ಸಾಧ್ಯವಿಲ್ಲ. ಮತ್ತು ಅವರ ಕೆಟ್ಟ ಪ್ರಾರ್ಥನೆಯು ಯಾವುದೇ ಕೆಟ್ಟ ಪರಿಣಾಮ ಬೀರುವುದಿಲ್ಲ. ಏಕೆಂದರೆ ಅಲ್‌ಅಲ್‌ವಾಲು ಬಿನ್ನಿಯಾತ್ ನಾನು ಸರ್ವಶಕ್ತನಾದ ಅಲ್ಲಾಹನನ್ನು ಮೆಚ್ಚಿಸಲು ಇದನ್ನು ಮಾಡಿದ್ದೇನೆ. ತನ್ನ ಸ್ವಾರ್ಥಕ್ಕಾಗಿ ಮಾಡಿಲ್ಲ. ಸ್ವಲ್ಪ ಸಮಯದ ನಂತರ, ನನ್ನ ಗುರುಗಳು ಮೊದಲಿನಂತೆಯೇ ನನ್ನ ಬಳಿಗೆ ಬಂದರು ಮತ್ತು ಅವರು ನನ್ನ ನಿಷ್ಠೆಯ ಬಗ್ಗೆ ತಿಳಿದುಕೊಂಡು ಹೇಳಿದರು ನೀವು ಚೆನ್ನಾಗಿ ಮಾಡಿಲ್ಲ. ಮುರ್ಶಿದ್ ಇರುವಾಗ ಅವನನ್ನು ಬಿಟ್ಟು ಯಾಕೆ ಹೀಗೆ ಮಾಡಿದಿರಿ? ನೀವು ಅವರಲ್ಲಿ ಯಾವ ಘನತೆಯನ್ನು ಕಂಡಿದ್ದೀರಿ? ಅದಕ್ಕೆ ನಾನು ಅವರಿಗೆ ಉತ್ತರಿಸಿದೆ, ಅವರ ಬೈಅತ್‌ನ ನಂತರ ನನ್ನ ಆಧ್ಯಾತ್ಮಿಕ ಕಾಯಿಲೆಗಳು ಅಲ್ಲಾಹನ ಅನುಗ್ರಹದಿಂದ ದೂರವಾಯಿತು ಮತ್ತು ನನ್ನ ಹೃದಯಕ್ಕೆ ಸಾಂತ್ವನ ದೊರೆತಿದೆ ಎಂದು ನಾನು ಅವರ ಪವಾಡವನ್ನು ನೋಡಿದ್ದೇನೆ. ಅದಕ್ಕೆ ಅವರು ಹೇಳಿದರು ನಾನು ಸಹ ಅವರ ಪವಾಡವನ್ನು ನೋಡಲು ಬಯಸುತ್ತೇನೆ. ನಿಮ್ಮ ಪುತ್ರ ವಲೀವುಲ್ಲಾಹ್ ಅವರ ದುಆದಿಂದ ಗುಣಮುಖನಾದರೆ ನೀವು ಪರಿಪೂರ್ಣ ಮಾರ್ಗದರ್ಶಕನಿಗೆ ಬೈಅತ್ ಮಾಡಿದ್ದೀರಿ ಎಂದು ನಾನು ಅರ್ಥಮಾಡಿಕೊಳ್ಳುತ್ತೇನೆ. ಮತ್ತು ಅವರ ದಾವೆಯು ಸತ್ಯವಾಗಿದೆ ಎಂದು ಒಪ್ಪಿಕೊಳ್ಳುತ್ತೇನೆ. ಆಗ ನನ್ನ ಮಗ ವಲಿಯುಲ್ಲಾಹ್‌ನ ಕಾಲು ಹೊಡೆತ ಬಿದ್ದ ಕಾರಣದಿಂದ ಒಣಗಿ ನಡೆಯಲು ಆಗುತ್ತಿರಲಿಲ್ಲ. ಅವನು ತನ್ನ ತೋಳಿನ ಕೆಳಗೆ ಒಂದು ಕೋಲನ್ನು ಇಟ್ಟುಕೊಂಡು ನಡೆಯುತ್ತಿದ್ದನು. ಅವನು ಅದರ ಸಹಾಯದೊಂದಿಗೆ ನಡೆಯುತ್ತಿದ್ದನು ಮತ್ತು ಆಗಾಗ್ಗೆ ಕೆಳಗೆ ಬೀಳುತ್ತಿದ್ದನು. ಹಲವಾರು ವೈದ್ಯರು ಮತ್ತು ಸಿವಿಲ್ ಶಸ್ತ್ರಚಿಕಿತ್ಸಕರು ಚಿಕಿತ್ಸೆ ನೀಡಿದರೂ ಏನೂ

ಪ್ರಯೋಜನವಾಗಲಿಲ್ಲ. ಪ್ರಾಸಂಗಿಕವಾಗಿ, ಸಿಯಾಲ್‌ಕೋಟ್‌ಗೆ ಮೇಜರ್ ಹಗ್ ಗೌ ಎಂಬ ಹೊಸ ಸಿವಿಲ್ ಸರ್ಜನ್ ಕೂಡ ಆಗಮಿಸಿದ್ದರು. ಅವರು ರೈಯದ ಆಸ್ಪತ್ರೆಯ ತಪಾಸಣೆಗೂ ಬಂದಿದ್ದರು. ಹಾಗಾಗಿ ವಲಿಯುಲ್ಲಾ ಶಾಗೆ ತೋರಿಸಿದೆ. ಚಿಕಿತ್ಸೆ ಉತ್ತಮವಾಗಬಹುದು ಎಂದು ಹೇಳಿದರು. ಆದರೆ ಮೂರು ಆಪರೇಷನ್‌ಗಳನ್ನು ಮಾಡಬೇಕಾಗುತ್ತದೆ. ಹಾಗಾಗಿ ಅವರು ಸಿಯಾಲ್‌ಕೋಟ್‌ನಲ್ಲಿ ಆಪರೇಷನ್ ಮಾಡಿದನು ಮತ್ತು ಎರಡು ಆಪರೇಷನ್‌ಗಳನ್ನು ರೈಯಾದ ಶಿಫಾ ಖಾನಾದಲ್ಲಿ ನಡೆಸಿದರು. ಮತ್ತೊಂದೆಡೆ, ನಾನು ಹಝ್ರತ್ ಸಾಹಿಬ್ ಅವರ ಸೇವೆಯಲ್ಲಿ ದುಆಗಾಗಿ ಬರೆದಿದ್ದೆ. ಅಲ್ಲಾಹನ ಅನುಗ್ರಹದಿಂದ ಅವನು ಸಂಪೂರ್ಣವಾಗಿ ಚೇತರಿಸಿಕೊಂಡನು ಮತ್ತು ಕೋಲಿನ ಅಗತ್ಯವಿರಲಿಲ್ಲ. ಆಗ ನಾನು ಹಝ್ರತ್ ಸಾಹಿಬರ ಪ್ರಾರ್ಥನೆಯನ್ನು ಅಲ್ಲಾಹನ ಅನುಗ್ರಹದಿಂದ ಹೇಗೆ ಸ್ವೀಕರಿಸಲಾಗಿದೆ ಎಂದು ನೋಡಿ ಎಂದು ಈ ಸಂತರಿಗೆ ಹೇಳಿದೆ. ಇದಕ್ಕೆ ಅವರು ಇದಕ್ಕೆ ಚಿಕಿತ್ಸೆಯೇ ಕಾರಣ ಎಂದು ಹೇಳಿದರು. ಚಿಕಿತ್ಸೆಯೂ ಮೊದಲೂ ನಡೆಯುತ್ತಿತ್ತು. ಆದರೆ ಈ ಚಿಕಿತ್ಸೆಯಲ್ಲಿ ಪ್ರಾರ್ಥನೆಯ ಮೂಲಕ ಮಾತ್ರ ಗುಣಪಡಿಸುವಿಕೆಯನ್ನು ಸಾಧಿಸಲಾಗಿದೆ. (ಸೀರತುಲ್ ಮಹದಿ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ವರದಿ ಸಂಖ್ಯೆ–926)

ಪ್ಲೇಗ್ ಪೀಡಿತದಿಂದ ಮಗುವನ್ನು ಗುಣಪಡಿಸುವುದು:

ಫಕ್ರುದ್ದೀನ್ ಸಾಹಿಬ್ ಅವರ ಪತ್ನಿ ಹೇಳುತ್ತಾರೆ: ಒಮ್ಮೆ ನಾನು ನನ್ನ ತಾಯ್ನಾಡಾದ ಮಯಾನಿಯಲ್ಲಿ ಇದ್ದೆ ಆಗ ನನ್ನ ಎರಡು ವರ್ಷದ ವಯಸ್ಸಿನ ಪುತ್ರ ಇಸ್ಹಾಖ್‌ನನ್ನು ಪ್ಲೇಗ್‌ನ ಎರಡು ಗಡ್ಡೆಗಳು ಕಾಣಿಸಿಕೊಂಡಿತು. ಆ ದಿನಗಳಲ್ಲಿ ಈ ರೋಗವು ಬಹಳ ವ್ಯಾಪಕವಾಗಿತ್ತು. ನಾವು ತುಂಬಾ ಹೆದರುತ್ತಿದ್ದೆವು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಲ್ಲಿ ದುಆವಿಗಾಗಿ ಪತ್ರವನ್ನು ಸಹ ಬರೆದಿದ್ದೇವು. ಒಂದು ತಿಂಗಳ ನಂತರ, ಹುಡುಗನು ಚೇತರಿಸಿಕೊಂಡನು ಮತ್ತು ಅವನನ್ನು ಖಾದಿಯಾನ್‌ಗೆ ಕರೆತರಲಾಯಿತು ಮತ್ತು ಹುಝೂರ್(ಅ) ಅವರ ಮುಂದೆ ಕಳುಹಿಸಿ ಪ್ಲೇಗ್ ರೋಗದಲ್ಲಿ ಬಳಲುತ್ತಿದ್ದ ಹುಡುಗ ಇವನಾಗಿದ್ದಾನೆ ಎಂದು ಹೇಳಿದರು. ಹುಝೂರ್(ಅ) ಅಗ ಮಲಗಿದ್ದರು. ಇದನ್ನು ಕೇಳಿದ ತಕ್ಷಣ ಎದ್ದು ಕುಳಿತುಕೊಂಡು ಹೇಳಿದರು "ಈ ಪುಟ್ಟ ಮಗುವಿಗೆ ಆ ಗಡ್ಡಗಳ ಕಾಣಿಸಿತ್ತೇ?" ಈಗ ಅಲ್ಲಾಹನ ಅನುಗ್ರಹದಿಂದ ಆ ಮಗು ಯುವಕನಾಗಿದ್ದಾನೆ ಮತ್ತು ಆರೋಗ್ಯಕರವಾಗಿದ್ದಾನೆ.(ಸೀರತುಲ್ ಮಹದಿ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ), ವರದಿ ಸಂಖ್ಯೆ–1348)

ಆತ್ಮೀಯ ಕೇಳುಗರೇ!! ಈಗ ನಾನು ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪ್ರಾರ್ಥನೆ ಸ್ವೀಕೃತಿಯ ಪವಾಡವನ್ನು ಪ್ರಸ್ತುತಪಡಿಸುತ್ತೇನೆ ಇವತ್ತಿನವರೆಗೂ ಪ್ರಪಂಚದಲ್ಲಿ ಕಾಣದ ಉದಾಹರಣೆ ಹುಚ್ಚುನಾಯಿ ಕಚ್ಚಿ ಹುಚ್ಚು ಹಿಡಿತಕ್ಕೊಳಗಾದ ವ್ಯಕ್ತಿ ಚೇತರಿಸಿಕೊಂಡದ್ದನ್ನು ಜಗತ್ತು ಕಂಡಿಲ್ಲ ಆದರೆ ಮಸೀಹ್ ಮುಹಮ್ಮದಿಯವರ ಪ್ರಾರ್ಥನೆಯ ಈ ಪ್ರಸ್ತಾವನೆ ಹೀಗಿದೆ. ನಿಮ್ಮ ಪ್ರಾರ್ಥನೆಯೊಂದಿಗೆ ರೋಗಿಯು ಗುಣಮುಖರಾದರು.

ಈ ವರದಿಯನ್ನು ಸಿರತುಲ್ ಮಹದಿಯಲ್ಲಿ ವರದಿ ಸಂಖ್ಯೆ 1221 ರ ಅಡಿಯಲ್ಲಿ ಹಝ್ರತ್ ಮೀರ್ ಅಬ್ದುಲ್ ರಹಮಾನ್ ಸಾಹಿಬ್(ರ), ರೇಂಜ್ ಆಫೀಸರ್ ಬಾರಾ ಮುಲ್ಲಾ ಕಾಶ್ಮೀರವನ್ನು ಉಲ್ಲೇಖಿಸಿ ಉಲ್ಲೇಖಿಸಲಾಗಿದೆ, ಆದರೆ ಈ ವಿನೀತನು ಈ ಮಹೋನ್ನತವಾದ ದುಷ್ಟಾಂತವನ್ನು ಪ್ರಾರ್ಥನೆಯ ಸ್ವೀಕೃತಿಯ ಘಟನೆಯನ್ನು ಹಝ್ರತ್ ಮಸೀಹ್ ಮೌಊದ್ ಲಐಹಿಸ್ಸಲಾಮ್ ಅವರ ಪದಗಳಲ್ಲಿ ವಿವರಿಸಬೇಕು. ಹಝ್ರತ್ ಮಸೀಹ್ ಮವೂದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಈ ದಿನಗಳಲ್ಲಿ ಕಾಣಿಸಿಕೊಳ್ಳಬಹುದಾದ ಐದನೇ ಚಿಹ್ನೆಯು ಪ್ರಾರ್ಥನೆಯ ಅಂಗೀಕಾರವಾಗಿದೆ, ಈ ಸಾರಾಂಶದ ವಿವರಣೆ ಏನೆಂದರೆ, ಅಬ್ದುಲ್‌ಕರೀಂ ಹೆಸರು, ತಂದೆ ಅಬ್ದುರ್ರಹ್ಮಾನ್ ಹೈದರಾಬಾದ್ ದಖಿನ್ ನಿವಾಸಿ, ನಮ್ಮ ಮದರಸದಲ್ಲಿ ಒಬ್ಬ ವಿದ್ಯಾರ್ಥಿ, ವಿಧಿಯನ್ವಯ ಅವನಿಗೆ ಹುಚ್ಚು ನಾಯಿ ಕಡಿಯಿತು. ನಾವು ಅವನ ಚಿಕಿತ್ಸೆಗಾಗಿ ಕಸೋಲಿ ಕಳುಹಿಸಿದೆವು. ಕೆಲ ದಿನಗಳವರೆಗೆ ಕಸೋಲಿಯಲ್ಲಿ ಚಿಕಿತ್ಸೆ ನಡೆಯಿತು. ಮತ್ತೆ ಅವನು ಖಾದಿಯಾನಿಗೆ ಮರಳಿ ಬಂದನು. ಕೆಲವು ದಿನಗಳ ನಂತರ ಮತ್ತೆ ಅವನಲ್ಲಿ ಹುಚ್ಚುತನದ ಚಿಹ್ನೆಗಳು ಗೋಚರಿಸಿದವು. ಅದು ಹುಚ್ಚು ನಾಯಿ ಕಡಿತದಿಂದ ಉಂಟಾಗುತ್ತವೆ. ನೀರು ನೋಡಿ ಹೆದರತೊಡಗಿದ ಸ್ಥಿತಿ ಗಂಭೀರವಾಯಿತು. ಆಗ ಆ ಪರದೇಶಿಯ ಮೇಲೆ ನನಗೆ ಮರುಕ ಹುಟ್ಟಿದಂತಾಯಿತು. ಅವನಿಗಾಗಿ ಪ್ರಾರ್ಥನೆಯ ಒಂದು ವಿಶೇಷ ಆಸಕ್ತಿ ಮೂಡಿತು. ಪ್ರತಿಯೊಬ್ಬರು ಆ ವ್ಯಕ್ತಿ ಕೆಲವು ಗಂಟೆಗಳಲ್ಲಿ ಸಾಯಬಹುದು ಅನ್ನುತ್ತಿದ್ದರು. ನಿರ್ವಾಹವಿಲ್ಲದೇ ಅವನಿಗೆ ಬೋರ್ಡಿಂಗ್‌ನಿಂದ ಹೊರಗೆ ಬಂದು ಪ್ರತ್ಯೇಕ ಮನೆಯಲ್ಲಿ ಇರಿಸಿದರು. ಕಸೋಲಿಯ ಬ್ರಿಟಿಷ್ ವೈದ್ಯರಿಗೆ ತಂತಿ ಸಂದೇಶ ಮೂಲಕ ಕೇಳಲಾಯಿತು. ಅವನಿಗಾಗಿ ಏನಾದರೂ ಚಿಕಿತ್ಸಾ ಕ್ರಮವಿದೆಯೇ ಎಂದು. ಅಲ್ಲಿಂದ ಉತ್ತರ ಬಂತು. ಈಗ ಅವನಿಗಾಗಿ ಯಾವ ಚಿಕಿತ್ಸೆಯೂ ಇಲ್ಲ. ನನ್ನ ಮನಸ್ಸಿನಲ್ಲಿ ಕಳವಳ ಉಮಟಾಯಿತು. ನನ್ನ ಮಿತ್ರರು ಸಹ ಅವನ ಕುರಿತು ದುಆ ಮಾಡಲು ಪ್ರೇರೇಪಿಸಿದರು. ಏಕೆಂದರೆ ಆ ಬಡವನ ಸ್ತಿತಿ ಕರುಣಾಜನಕವಾಗಿತ್ತು. ನನ್ನ ಮನಸ್ಸಿನಲ್ಲಿಯೂ ಭಯ ಉಂಟಾಯಿತು. ಒಂದು ವೇಳೆ ಇವನು ತೀರಿ ಹೋದರೆ ನಮ್ಮ ವಿರೋಧಿಗಳು ಕೆಟ್ಟ ರೀತಿಯಲಿ ಬಳಸಿಕೊಲ್ಲುವರು. ಆಗ ನನ್ನ ಮನಸ್ಸಿನಲ್ಲಿ ತುಂಬ ಕಳವಳ ಅಸಮಾಧಾನ ಉಂಟಾಯಿತು. ಮತ್ತು ಅಸಾಮಾನ್ಯ ರೀತಿಯ ಗಮನಹರಿಸಿದಂತಾಯಿತು. ಅದು ನನ್ನದ್ದಾಗದೇ ದೇವನಾಗ್ರಹದಂತಿತ್ತು. ಇಂತಹ ಸ್ಥಿತಿ ಅಲ್ಲಾಹನ ಅನುಗ್ರಹದಿಂದ ಉಂಟಾಗುತ್ತದೆ ಆಗ ಆ ಮೃತನನ್ನು ಜಿವಂತಗೊಳಿಸಲು ಪ್ರಾರ್ಥನೆಯ ಮೊರೆ ಹೋದೆ. ಅವನ ಸ್ಥಿತಿ ಮೃತನಂತೆಯೇ ಇತ್ತು. ಅವನು ನೀರಿನಿಂದ ಮತ್ತು ಬೆಳಕಿನಿಂದ ಹೆದರಿ ಓಡಿ ಹೋಗುತ್ತಿದ್ದ. ತಕ್ಷಣದಿಂದಾಗಿ ಸ್ಥಿತಿ ಪಲ್ಲಟಗೊಂಡಿತು. ಈಗ ಆರೋಗ್ಯವಾಯಿತು. ಅವನು ಹೇಳಿದ. ಈಗ ನನಗೆ ನೀರಿನಿಂದ ಹೆದರಿಕೆ ಆಗುತ್ತಿಲ್ಲ. ಅಗ ಅವನಿಗೆ ಕೊಡಲಾಯಿತು. ಅವನು ಏನೂ ಹೆದರಿಕೆಯಿಲ್ಲದೇ ನೀರು ಕುಡಿದನು. ಅಲ್ಲದೇ ನೀರಿನಿಂದ ವುಝು ಮಾಡಿ ನಮಾಝ್ ನಿರ್ವಹಿಸಿದನು. ರಾತ್ರಿಯೆಲ್ಲ ಸರಿಯಾಗಿ ನಿದ್ರೆ ಮಾಡಿದನು. ಮತ್ತು ಎಲ್ಲ ರೀತಿಯ ಹುಚ್ಚುತನ ಹಾಗೂ ಭಯ ದೂರವಾಯಿತು. ಕೆಲ ದಿನಗಳ ನಂತರವೇ ಪರಿಪೂರ್ಣ ಆರೋಗ್ಯದಂತನಾದನು. ನನ್ನ ಮನಸ್ಸಿನಲ್ಲಿ ಹಾಕಲಯಿತು.ಈ ಹಚ್ಚುತನದ ಸ್ಥಿತಿ ಅವನನ್ನು ನಾಶಗೊಳಿಸಲು ಆಗಿರಲಿಲ್ಲ. ಬದಲು ಅಲ್ಲಾಹನ ದೃಷ್ಟಾಂತಕ್ಕಾಗಿ ಈ ಸ್ಥಿತಿ ಉಂಟಾಗಿತ್ತು. (ರೂಹಾನಿ ಖಝಾಈನ್, ಸಂಪುಟ–22, ಹಖೀಖತುಲ್ ವಹಿ ಪುಟ 470–471) (ಖುತ್ಬಾತೆ ಮಹ್ಮೂದ್, ಸಂಪುಟ–1, ಪುಟ–124)

**(ಮುಂದುವರಿಯುವುದು)**

***129 ನೇ ಜಲ್ಸಾ ಸಾಲಾನ ಖಾದಿಯಾನ್***
***27, 28, 29 ಡಿಸೆಂಬರ್ 2023ರಂದು***
***ಆಯೋಜಿಸಲಾಗುವುದು***

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 129ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

**"ಉಪವಾಸ ಮಾಡಿರಿ, ಆರೋಗ್ಯ ಪಡೆಯಿರಿ."**
**"ಜನರಿಗೆ ಕೃತಜ್ಞತೆ ಸಲ್ಲಿಸದವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸಲಾರನು."**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**M.B. Nasir Ahmed & Family, Bengaluru, Karnataka**

**ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ. ಆದರೆ ಜನರು ಅದನ್ನು ಅರಿತಿಲ್ಲ.**
(ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್)

**ದುಆವಿನ ಆಕಾಂಕ್ಷಿ:**
**Mubarak Ahmed Naseem & Family, Shimoga, Karnataka**

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.05, Thursday, 06 June 2024, Issue No. 23

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

*(ಬದರ್ ಸಂಚಿಕೆ-22ರ ಉಳಿದ ಭಾಗ ಮುಂದುವರಿಸಲಾಗಿದೆ)*

ನಂತರ ಮೇಯರ್ ಸಾಹಿಬ್ ಹೇಳಿದರು. ನೀವೆಲ್ಲ ತಿಳಿದವರೇ ಆಗಿದ್ದೀರಿ. ನಾವು ನಗರ ಆಡಳಿತದಿಂದ ಈ ಪೈಕಿ ಕಿಂಚಿತ್ತೂ ಕಾಳಜಿಯಾಗಿರಲಿಲ್ಲ. ಆದರೂ ಪ್ಲಾಟಿನ ಮಾಲೀಕರು ಈ ಜಾಗ ಜಮಾಅತಿಗೆ ಮಸೀದಿ ನಿರ್ಮಾಣ ಮಾಡಲು ಮಾರಾಟ ಮಾಡಿದರು.

ಪ್ಲಾಟ್‌ನ ಮಾಲೀಕರು ಈ ಜಾಗವನ್ನು ನಗರ ಆಡಳಿತಕ್ಕಾಗಲೀ ಅಥವಾ ಯಾವೊಬ್ಬ ದೊಡ್ಡ ಉದ್ಯಮಿಗಾಗಲೀ ಮಾರಾಟ ಮಾಡಲು ಇಚ್ಚಿಸಿರಲಿಲ್ಲ. ಬದಲು ಅಹ್ಮದಿಯಾ ಜಮಾಅತಿಗೆ ಮಸೀದಿ ನಿರ್ಮಾಣಕ್ಕಾಗಿ ಕೊಟ್ಟುಬಿಟ್ಟರು. ಅದಾಗ್ಯೂ ಇದೊಂದು ವಾಣಿಜ್ಯ ವಲಯವಾಗಿತ್ತು. ನಮ್ಮ ದೃಷ್ಟಿಯಲ್ಲಿ ಈ ಮಸೀದಿ Council Hall ಬಳಿ ಇರಬೇಕಾಗಿತ್ತು. ನಮಗೆ ಈ ಜಾಗ ಮಾರಾಟವಾದ ಸುದ್ದಿ ಸಿಕ್ಕಿದ ಮೇಲೆ ನಮಗೆ ಕಾನೂನು ರೀತ್ಯ ತಡೆಯಲು ಸಮಯ ಸಹ ಇರಲಿಲ್ಲ. ಆದರೆ ಇಂದು ನಮಗೆ ತುಂಬಾ ಸಂತೋಷವಾಗುತ್ತಿದೆ. ಒಂದು ದೀರ್ಘ ಸಮಯದ ನಂತರ, ಬಹಳಷ್ಟು ಶ್ರಮಪಟ್ಟ ನಂತರ ಈ ಮಸೀದಿ ನಿರ್ಮಾಣವಾಗಿದೆ.

ಜಮಾಅತಿನ ವರ್ಗವು ನಮ್ಮ ನಗರ ಆಡಳಿತದೊಂದಿಗೆ ತುಂಬಾ ಉತ್ತಮ ರೀತಿಯಲಿ ಸಹಕಾರ ನೀಡಿದೆ. ಹೀಗೆ ಒಂದು ಅತ್ಯಂತ ಸುಂದರವಾದ ಮಸೀದಿ ನಮ್ಮ ಸಾಮಾಜಿಕ ವಲಯದ ಮಧ್ಯ ಉಪಸ್ಥಿತವಿದೆ. ಇದೇ ರೀತಿ ಧರ್ಮಕಾರ್ಯಗಳಿಗಾಗಿ ಸಮಾಜದಲ್ಲಿ ಜಾಗ ಕೊಡಬೇಕಾಗಿದೆ.

ನಂತರ ಮೇಯರ್ ಅವರು ಹೇಳಿದರು. ನನ್ನ ಅಬಿಲಾಷೆಯಿದೆ ಮತ್ತು ಬಯಕೆಯಿದೆ. ಈ ಮಸ್ಜಿದ್ ಮುಬಾರಕ್ ಕೇವಲ ಅಹ್ಮದಿಯಾ ಸಮುದಯವರಿಗಷ್ಟೇ ಅನುಗ್ರಹದಾಯಕವಾಗಿರದೆ Florstadt ನಗರದ ಎಲ್ಲಾ ನಾಗರಿಕರಿಗೆ, ನೆರೆಹೊರೆಯವರಿಗೆ ಮತ್ತು ಅತಿಥಿಗಳೆಲ್ಲರಿಗೂ ಈ ಮಸೀದಿ ಅನುಗ್ರಹದಾಯಕವಾಗಿರಲಿ. ಮತ್ತು ಈ ಮಸೀದಿ ನಮಗೆಲ್ಲರಿಗೋಸ್ಕರ ಸಾಮರಸ್ಯ ಉಂಟು ಮಾಡಿ ಪ್ರತಿಯೊಬ್ಬರಲ್ಲಿ ಏಕತೆಯನ್ನುಂಟು ಮಾಡುವಂತಾಗಲಿ.

ಕೊನೆಯಲ್ಲಿ ಮೇಯರ್ ಸಾಹೇಬರು His Holiness ಹುಝೂರ್ ಅನ್ವರ್(ಅತಬಿಅ) ಅವರಿಗೆ ಮತ್ತು ಅದೇ ರೀತಿ ಎಲ್ಲಾ ಜಮಾಅತ್ ಸದಸ್ಯರಿಗೆ ಮತ್ತು ಈ ಮಸೀದಿಯಲ್ಲಿ ಪ್ರವೇಶಿಸುವವರೆಲ್ಲರಿಗೂ ಶುಭವನ್ನು ಕೋರುತ್ತೇನೆ. ಮತ್ತು ಹೇಳಿದರು. ನಮ್ಮೆಲ್ಲರ ಪ್ರಭು ಒಬ್ಬನೇ ಆಗಿದ್ದಾನೆ. ಅವರು ಈ ಮಸೀದಿಯನ್ನು ಶುಭಕರನ್ನಾಗಿ ಮಾಡಲಿ.

ನಂತರ Niddatal ನಗರದ ಮೇಯರ್ Michel Hahn ಸಾಹಿಬ್ ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸುತ್ತಾ ಹೇಳಿದರು. ಮೊಟ್ಟ ಮೊದಲಾಗಿ ನಾನು ಹುಝೂರೆ ಅನ್ವರ್ ಅವರಿಗೆ ಸ್ವಾಗತವನ್ನು ಕೋರುತ್ತೇನೆ. ಅನಂತರ ಎಲ್ಲಾ ಉಪಸ್ಥಿತರಿಗೆ ಮತ್ತು ಜಮಾಅತ್ ಸದಸ್ಯರಿಗೆ ಸಲಾಂ ಹೇಳುತ್ತೇನೆ.

ನಂತರ ಅವರು ಹೇಳಿದರು. Niddatal ನಲ್ಲಿಯೂ ಅಹ್ಮದಿಯಾ ಮುಸ್ಲಿಂ ಸದಸ್ಯರು ಇದ್ದಾರೆ. ಅವರು ಈ Florstadt ಜಮಾಅತಿನ ಭಾಗವಾಗಿದ್ದಾರೆ. ನಾನು ಇಂದು ಪೌರ ಸಂಸ್ಥೆಯಿಂದ ನಿಮಗೆ ಶುಭ ಕೋರಲು ಸಂತಸವಾಗುತ್ತಿದೆ. ಮತ್ತು ಅವರು ಹೇಳಿದರು. ಮಸ್ಜಿದ್ ಮುಬಾರಕ್ ಹೆಸರೇ ಬರಕತ್ ಹೊಂದಿದ್ದು ಎಂದಾಗಿದೆ. ಹಾಗಿರುವಾಗ ಇವರಲ್ಲಿ ಯಾವತ್ತೂ ಬರಕತ್ ಇರಲಿ ಎಂದು ಹಾರೈಸುತ್ತೇನೆ. ಇನ್ನೊಂದು ನನಗೆ ಸಂತೋಷದ ಮಾತೇನೆಂದರೆ, ಅದು ನ್ಯಾಷ್ನಲ್ ಅಮೀರ್ ಸಾಹೇಬ್ ಒಮ್ಮೆ ಹೇಳಿದರು. ನೀವು ಶೈತಾನನನ್ನು ಹೊರತುಪಡಿಸಿ ಎಲ್ಲರಿಗೂ ಮಸೀದಿಯನ್ನು ಪ್ರವೇಶಿಸಲು ಅನುಮತಿ ನೀಡುತ್ತೀರಿ ಎಂದು. ಇದೊಂದು ಧಾರ್ಮಿಕ ಸಂಘಟನೆಯ ನೆಲೆಯಲ್ಲಿ ಒಂದು ಅತಿ ಸುಂದರವಾದ ದೃಷ್ಟಿಕೋನವಾಗಿದೆ, ನೀವು ಎಲ್ಲರೊಡನೆ ಯಾವ ಮತದವರೇ ಆಗಲಿ ಉತ್ತಮ ವ್ಯವಹಾರವನ್ನು ಬಯಸುತ್ತೀರಿ ಎಂದು ಹೇಳುತ್ತಾ ಕೊನೆಯಲ್ಲಿ ತಮ್ಮ ಶುಭಕಾಂಕ್ಷೆಗಳನ್ನು ವ್ಯಕ್ತಪಡಿಸಿದರು.

ಅನಂತರ ರಾಜ್ಯ ಸಂಸತ್ ಸದಸ್ಯರು Tobia Utten ಅವರು ತಮ್ಮ ಪರಿಚಯ ಭಾಷಣ ನೀಡಿದರು. ಅವರು ಪ್ರಪ್ರಥಮವಾಗಿ ಹುಝೂರ್ ಅನ್ವರ್(ಅತಬಿಅ) ಅವರಿಗೆ ಸಲಾಂ ಪ್ರಸ್ತುತಪಡಿಸಿದರು. ಮತ್ತು ಸ್ವಾಗತವನ್ನು ಬಯಸಿದರು. ಅದರ ಜೊತೆಯಲ್ಲೇ ಎಲ್ಲಾ ಉಪಸ್ಥಿತರಿಗೆ ಮತ್ತು ಜಮಾಅತ್ ಬಾಂಧವರಿಗೆ ಶುಭ ಕೋರಿದರು.

ನಂತರ ಅವರು ಹೇಳಿದರು. ಇಂದು ಲೋಕವು ಅತ್ಯಂತ ಭಯಂಕರವಾದ ಪರಿಸ್ಥಿತಿಯಲ್ಲಿದೆ, ಕತ್ತಲೆ ಆವರಿಸಿದ ಈ ಕಾಲದಲ್ಲಿ ನಮಗೆ ಒಂದು ಸಂತೋಷದ ದಿನ ಬಂದೊದಗಿದೆ. ಅದೇನೆಂದರೆ ಇಂದು ಅಹ್ಮದಿಯಾ ಜಮಾಅತ್ Florstadt ನಗರದಲ್ಲಿ ತಮ್ಮ ಮಸ್ಜಿದ್ ಮುಬಾರಕ್‌ನ್ನು ಉದ್ಘಾಟಿಸುತ್ತಿದೆ. ಈ ಮಸೀದಿಯ ಉದ್ಘಾಟನೆ ಜರ್ಮನಿನಲ್ಲಿ ಧಾರ್ಮಿಕ ಸ್ವಾತಂತ್ರ್ಯವಿದೆ ಎನ್ನಲು ಸಾಕ್ಷ್ಯವಾಗಿದೆ. ಮಸೀದಿ ಎಂದರೆ ಅಲ್ಲಿ ಆರಾಧನೆ ಮಾಡಲಾಗುತ್ತದೆ, ಜನರು ಪರಸ್ಪರ ಭೇಟಿಯಾಗುತ್ತಾರೆ ಮತ್ತು ಅದು ಶಾಂತಿಯ ತಾಣವಾಗಿರುತ್ತದೆ. ನನ್ನ ಸಂತೋಷಕ್ಕೆ ಕಾರಣವೇನೆಂದರೆ ಜಮಾಅತ್ ಅಹ್ಮದಿಯಾ ಕೇವಲ ತಮ್ಮ ಸದಸ್ಯರಿಗಷ್ಟೇ ಚಿಂತಿಸುವುದಿಲ್ಲ. ಬದಲು ಮಾನವೀಯ ಸೇವೆಯತ್ತಲೂ ತಮ್ಮ ಗಮನ ಹರಿಸುತ್ತದೆ.

ನಂತರ ಅವರು ಹೇಳಿದರು. ನಾನು Hesse ರಾಜ್ಯದಲ್ಲಿ ನಾನಾ ರೀತಿಯಲ್ಲಿ ಅಹ್ಮದಿಯಾ ಸದಸ್ಯರೊಂದಿಗೆ ಸಂಪರ್ಕದಲ್ಲಿರುತ್ತೇನೆ ಮತ್ತು ಅಹ್ಮದಿಯಾ ಜಮಾಅತ್ ನಮ್ಮ ಸಮಾಜದಲ್ಲಿ ಸಕ್ರಿಯರಾಗಿರುತ್ತಾರೆ. ನಮ್ಮ ಆಡಳಿತವು ಧಾರ್ಮಿಕ ತಾರತಮ್ಯ ಮಾಡುವುದಿಲ್ಲ. ಆಡಳಿತವು ಇಂತಹ ಧಾರ್ಮಿಕ ಮಿತ್ರರನ್ನು ತನ್ನ ಸಂಗಡಿಗ ಎಂದು ಭಾವಿಸುತ್ತದೆ. ನೀವು ಧರ್ಮದ ಕಾರ್ಯಗಳ ಜೊತೆಯಲ್ಲಿ ಮಾನವ ಸೇವೆ ಮಾಡುವವರಾಗಿದ್ದೀರಿ. ಹಲವು ವರ್ಷಗಳಿಂದ ಅಹ್ಮದಿಯಾ ಜಮಾಅತ್ ಜರ್ಮನಿ hesse ರಾಜ್ಯದಲ್ಲಿ ಶಾಳೆಗಳಲ್ಲಿ Religional Teaching ನ ಹೊಣೆ ಹೊತ್ತಿದ್ದೀರಿ. ಮತ್ತು ಇದರಲ್ಲಿ ಉತ್ತಮ ಯಶಸ್ಸನ್ನು ಪಡೆದುಕೊಂಡಿದ್ದಿರಿ.

ನಂತರ ಅವರು ಹೇಳಿದರು. ಇಂದಿನ ಸಂತೋಷದ ಈ ಸಮಯದಲ್ಲಿ ನಾವು ಲೋಕದ ಭಯಂಕರವದ ಸುದ್ದಿಗಳನ್ನು ಉಪೇಕ್ಷಿಸುವುದು ಸಮಂಜಸವಾಗಿ ಕಾಣುವುದಿಲ್ಲ, ಪಾಕಿಸ್ತಾನದಲ್ಲಿ ಅಹ್ಮದಿಯಾ ಜಮಾಅತ್ ಹಲವು ರೀತಿಯ ಕಷ್ಟಗಳನ್ನು ಸಹಿಸುತ್ತಿದೆ. ಈ ವರ್ಷ ಹಿಂಸೆ ದಬ್ಬಾಳಿಕೆ ಇನ್ನಷ್ಟು ಹೆಚ್ಚಾಗಿದೆ. ನಿಜ ಹೇಳಬೇಕಾದರೆ ಪಾಕಿಸ್ತಾನದ ಪರಿಸ್ಥಿತಿ ಚೆನ್ನಾಗಿಲ್, ಅದು ಅಹ್ಮದಿಯರಿಗಾಗಲಿ, ಕ್ರಿಸ್ತರಿಗೆ ಆಗಲಿ, ಕೆಲವು ದಿಗನಳ ಹಿಂದೆ ಭ್ರಮೆಗಳಿಗೆ ಒಲಗಾಗಿ ಭಯೋತ್ಪಾದಕರು ಕ್ರೈಸ್ತರ ಆರಾಧನಾ ಸ್ಥಳಗಳ ಮೇಲೆ ಹಲ್ಲೆ ನಡೆಸಿದರು. ಚರ್ಚ್‌ಗಳನ್ನು ಸುಡಲಾಯಿತು. ಧಾರ್ಮಿಕ ಭಾವನೆಗಳನ್ನು ದುರ್ಬಳಕೆ ಮಾಡಲಾಗುತ್ತಿದೆ.

ಅವರು ಹೇಳಿದರು. ಇಂತಹ ಜನರು ಧರ್ಮವನ್ನು ಸಂವಿಧಾನ ರೀತಿಯಲ್ಲಿ ಬಳಸಿಕೊಳ್ಳುತ್ತಾರೆ. ಅವರಿಗೆ ಧರ್ಮದಿಂದ ಯಾವ ಸಂಬಂಧವೇ ಇರುವುದಿಲ್ಲ. ಆದರೆ ಇಂತಹ ಕತ್ತಲೆ ಅವಸ್ಥೆಯಲ್ಲಿ ವಿಶೇಷ ರೀತಿಯಲ್ಲಿ ದೇವನ ಪ್ರಕಾಶದ ಅವಶ್ಯಕತೆ ಇರುತ್ತದೆ. ಪ್ರೀತಿ ಮತ್ತು ಶಾಂತಿಯ ಅಗತ್ಯತೆ ಇರುತ್ತದೆ. ಅಹ್ಮದಿಯಾ ಮುಸ್ಲಿಂ ಜಮಾಅತಿನಲ್ಲಿ ವಿಶೇಷವಾಗಿ ಈ ಗುಣಗಳು (Values) ಹೊಂದಿರುತ್ತಾರೆ. ನಮಗೆ ಪರಸ್ಪರ ಒಳಗೂಡಿ ಈ ಕಠಿಣ ಪರಿಸ್ಥಿತಿಳನ್ನು ಎದುರಿಸಬೇಕಾಗಿದೆ. ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸಿಕೊಳ್ಳಬೇಕಾಗಿದೆ. ಮುಂದೆಯೂ ಸಹ ನಮಗೆ ಜರ್ಮನಿಯ ಸಂವಿಧಾನ ರೀತ್ಯಾ ಶಾಂತಿ ಮತ್ತು ಸಮಾನತೆ ಒಟ್ಟಾಗಿ ಪಾಲಿಸಬೇಕಾಗಿದೆ. ನಮ್ಮ ಸಂವಿಧನ ನಮ್ಮ ಪ್ರಜಾರಾಜ್ಯ ಪ್ರಣಾಲಿಕೆ ಪ್ರತಿಯೊಬ್ಬರಿಗೆ ಸ್ವಾತಂತ್ರ್ಯತೆ ನೀಡುತ್ತದೆ. ಆದರೆ ಈ ಸ್ವಾತಂತ್ರ್ಯವನ್ನು ಸರಿಯಾದ ರೀತಿಯಲ್ಲಿ ಬಳಸಲು ನಿರ್ಬಂಧಿಸುತ್ತದೆ. ಈ ಸ್ವಾತಂತ್ರ್ಯದ ಸದ್ಬಳಕೆ ಮಾಡಿಕೊಳ್ಳಬೇಕು. ಯಾವುದೇ ಗ್ರಂಥದ ಬಗ್ಗೆ ಚರ್ಚಿಸಿರಿ, ಅದರ ಕುರಿತು ಉಲ್ಲೇಖಿಸಿದಿರಿ. ಆದರೆ ಅದನ್ನು ಸುಡುವುದು ಮತ್ತು ಇತರರ ಭಾವನೆಗಳಿಗೆ ಧಕ್ಕೆ ತರುವುದು ಒಳ್ಳೆಯದಲ್ಲ.

**(ಮುಂದುವರಿಯುವುದು)**

**ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.